ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 242 RNI Number : KNKAN/25/A2770 13-09-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :242 ರಾಯಚೂರು 13-09-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ಗಣೇಶೋತ್ಸವಕ್ಕೆ ಕಟ್ಟುನಿಟ್ಟಿನ ಭದ್ರತೆ: 48 ವಿಸರ್ಜನಾ ಸ್ಥಳಗಳು ಸೂಕ್ಷ್ಮ ಕೇಂದ್ರ: ಎಸ್ಪಿ ಕಟ್ಟುನಿಟ್ಟಿನ ಕ್ರಮ

ರಾಯಚೂರು, ಸೆ.12–

ರಾಯಚೂರು ಜಿಲ್ಲೆಯಲ್ಲಿ ಗಣೇಶೋತ್ಸ ವದ ಹಿನ್ನೆಲೆಯಲ್ಲಿ ಇದುವರೆಗೆ 2,578 ಗಣಪತಿ ಮೂರ್ತಿಗಳನ್ನು ಪ್ರತಿಷ್ಠಾಪಿಸಿರುವುದು ವರದಿಯಾಗಿದ್ದು, ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ನಾಳೆಯವರೆಗೂ ಅವಕಾಶವಿದೆ. ಜಿಲ್ಲೆಯಲ್ಲಿ ಗಣೇಶೋತ್ಸ ವ ಶಾಂತಿಯುತವಾಗಿ ನಡೆಯುವಂತೆ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಭದ್ರತಾ ಕ್ರಮಗಳನ್ನು ಕೈಗೊಂಡಿದೆ ಕೋಮು ಸಮಾರ್ಧತೆಯುತ್ತ ಧಕ್ಕೆಯಾದರೆ ಹಾಗೂ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳದೆ ಇದ್ದರೆ ಅಂತವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕರು ತಿಳಿಸಿದ್ದಾರೆ.

ನಗರದ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಾರ್ಯಾಲಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಸಂಬಂಧಿಸಿದಂತೆ ಈಗಾಗಲೇ 148 ಶಾಂತಿ ಸಭೆಗಳನ್ನು ನಡೆಸಲಾಗಿದೆ. ರಾಯಚೂರು ನಗರ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕುಗಳು ಹಾಗೂ ಗ್ರಾಮಗಳಲ್ಲಿ ವಿವಿಧ ಸಮುದಾಯಗಳ ಮುಖಂಡರು ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಗಣೇಶ ಮಂಡಳಿಗಳಿಂದ ಮುಚ್ಚಳಿಕೆ ಪತ್ರಗಳನ್ನು ಪಡೆದುಕೊಳ್ಳಲಾಗಿದೆ ಎಂದು ಹೇಳಿದರು.

ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಜಿಲ್ಲೆಯ ವಿವಿಧ



ತಾಲೂಕುಗಳ 19 ಗ್ರಾಮಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ನಿರ್ಬಂಧ ವಿಧಿಸಲಾಗಿದೆ. ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ 1,557 ರೌಡಿ ಆಸಾಮಿಗಳ ಪೈಕಿ 1,454 ಜನರ ವಿರುದ್ಧ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ. ಅವರಲ್ಲಿ 1,124 ಜನರಿಂದ ತಾಲೂಕು ದಂಡಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ಅಧಿಕಾರಿಗಳ ಮುಂದೆ ಮುಚ್ಚಳಿಕೆ ಪತ್ರ ಬರೆಯಿಸಿಕೊಳ್ಳಲಾಗಿದೆ. 19 ರೌಡಿ ಆಸಾಮಿಗಳನ್ನು ಒಂದು ದಿನದ ಮಟ್ಟಿಗೆ ಜೈಲಿಗೆ ಕಳುಹಿಸಲಾಗಿದ್ದು, ಮತ್ತೂ 23 ಜನರ ವಿರುದ್ಧ ಗಡಿಪಾರು ಕ್ರಮ ಕೈಗೊಂಡು ಚಿಕ್ಕಮಗಳೂರು, ದಕ್ಷಿಣ ಕನ್ನಡ ಹಾಗೂ ವಿಜಯನಗರ ಜಿಲ್ಲೆಗಳ ಕಡೆಗೆ ಕಳುಹಿಸಲಾಗಿದೆ. ಗಡಿಪಾರು ಮಾಡಿರುವವರ ಹಾಜರಾತಿಯನ್ನು ಕಡ್ಡಾಯವಾಗಿ ಪಡೆಯುವ ಕುರಿತು ಇಂದು ಅಥವಾ ನಾಳೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಸಾರ್ವಜನಿಕರ ಸುರಕ್ಷತೆಗಾಗಿ ಒಟ್ಟು 16,733 ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಗಣೇಶ ಮೂರ್ತಿ ವಿಸರ್ಜನೆ ನಡೆಯುವ ಪೈಕಿ 48 ಸ್ಥಳಗಳನ್ನು ವಿಶೇಷ ಸೂಕ್ಷ್ಮ ಕೇಂದ್ರಗಳೆಂದು ಗುರುತಿಸಿ ಹೆಚ್ಚುವರಿ ಭದ್ರತೆ ಒದಗಿಸಲಾಗುವುದು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ ಎಂದರು.

ಗಣೇಶೋತ್ಸ ವದ ಬಂದೋಬಸ್ತ್‌ಗಾಗಿ ಪೊಲೀಸ್ ಅಧಿಕಾರಿಗಳು, ಪೊಲೀಸ್ ಸಿಬ್ಬಂದಿ, ಗೃಹರಕ್ಷಕದಳದ 500 ಸಿಬ್ಬಂದಿ, ಸಶಸ್ತ್ರ ಮೀಸಲು ಪಡೆಯ 10 ತುಕಡಿಗಳು, ಕೆಎಸ್‌ಆರ್‌ಪಿ 6 ತುಕಡಿಗಳು ಹಾಗೂ ಎಎಸ್‌ಸಿ ಒಂದು ತಂಡ ಸೇರಿದಂತೆ ಅಗತ್ಯ ಪ್ರಮಾಣದ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕರು ತಿಳಿಸಿದರು.

ಗಣೇಶೋತ್ಸ ವದ ಸಂದರ್ಭದಲ್ಲಿ ಮಾದಕ ದ್ರವ್ಯ ಸೇವಿಸಿ ವಾಹನ ಚಲಾಯಿಸುವವರು, ಬೈಕ್ ವೀಲಿಂಗ್ ಮಾಡುವವರು, ಮಹಿಳೆಯರು, ಮಕ್ಕಳು ಹಾಗೂ ವೃದ್ಧರಿಗೆ ತೊಂದರೆ ನೀಡುವವರು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಗಣೇಶ ಮಂಟಪ ನಿರ್ಮಾಣಕ್ಕೆ ಮಹಾನಗರ ಪಾಲಿಕೆ, ವಿದ್ಯುತ್ ಸಂಪರ್ಕಕ್ಕೆ ಜೆಸ್ಕಾಂ, ಅಗತ್ಯ ಅನುಮತಿಗೆ ಲೋಕೋಪಯೋಗಿ ಇಲಾಖೆ ಹಾಗೂ ಧ್ವನಿವರ್ಧಕ ಮತ್ತು ಮೆರವಣಿಗೆಗೆ ಪೊಲೀಸ್ ಇಲಾಖೆಯಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕು. ಗಣೇಶ ಮಂಟಪಗಳಲ್ಲಿ ಬೆಳಿಗ್ಗೆ 6ರಿಂದ ರಾತ್ರಿ 10 ಗಂಟೆಯವರೆಗೆ ಮಾತ್ರ ಧ್ವನಿವರ್ಧಕ ಬಳಸಬೇಕು. ರಾತ್ರಿ 10ರಿಂದ ಬೆಳಿಗ್ಗೆ 6ರವರೆಗೆ ಧ್ವನಿವರ್ಧಕ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ನಿಯಮ ಉಲ್ಲಂಘಿಸುವವರ ವಿರುದ್ಧ ಸುಪ್ರೀಂ ಕೋರ್ಟ್ ಆದೇಶ, ರಾಜ್ಯ ಸರ್ಕಾರದ ಸುತ್ತೋಲೆ ಹಾಗೂ ಕರ್ನಾಟಕ ಪೊಲೀಸ್ ಕಾಯ್ದೆಯ ಕಲಂ 37ರ ಅನ್ವಯ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಗಣೇಶ ಮಂಟಪಗಳಲ್ಲಿ ಹಾಗೂ ಮೆರವಣಿಗೆಯಲ್ಲಿ ಅಶ್ಲೀಲ ಚಿತ್ರಗೀತೆಗಳು, ಕೋಮುಭಾವನೆ ಕೆರಳಿಸುವ ಹಾಡುಗಳು, ಘೋಷಣೆಗಳು ಅಥವಾ ಭಾಷಣಗಳನ್ನು ಪ್ರಸಾರ ಮಾಡಬಾರದು. ಇಂತಹ ಘಟನೆಗಳು ಕಂಡುಬಂದಲ್ಲಿ ಧ್ವನಿವರ್ಧಕ ಸೇರಿದಂತೆ ಸಂಬಂಧಿತ ಸ್ವತ್ತುಗಳನ್ನು ಸ್ಥಳದಲ್ಲಿಯೇ ಜಪ್ತಿ ಮಾಡಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

3 ನೇ ಪುಟಕ್ಕೆ...

ಜನ್ಮೋತ್ಸವ ಚಿತ್ರದ ಟ್ರೈಲರ್ ಸೆ.13ರಂದು ಅದ್ದೂರಿ ಬಿಡುಗಡೆ

ರಾಯಚೂರು,ಸೆ.12–

ಗಣೇಶೋತ್ಸ ವದ ಭವ್ಯತೆ, ಮಾನವೀಯ ಮೌಲ್ಯಗಳು ಹಾಗೂ ಭಾವನಾತ್ಮಕ ಕಥಾಹಂದರ ಒಳಗೊಂಡಿರುವ ಕನ್ನಡ ಚಲನಚಿತ್ರ ಜನ್ಮೋತ್ಸ ವ ಚಿತ್ರದ ಟ್ರೈಲರ್‌ನ್ನು ಸೆ.13ರಂದು ನಗರದ ಪೂರ್ಣಿಮಾ ಥಿಯೇಟರ್‌ನಲ್ಲಿ ಅದ್ದೂರಿಯಾಗಿ ಬಿಡುಗಡೆ ಮಾಡಲಾಗುವುದು ಎಂದು ಚಿತ್ರದ ನಿರ್ದೇಶಕ ರಾಮಾಚಾರಿ ತಿಳಿಸಿದರು.

ನಗರದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾರುತಿ ಪಿಕ್ಚರ್ಸ್ ಹಾಗೂ ಲೈಟ್ ಬಾಯ್ ಫಿಲಂ ಸಂಸ್ಥೆಗಳು ನಿರ್ಮಿಸಿರುವ ಜನ್ಮೋತ್ಸ ವ ಚಿತ್ರವನ್ನು ತಾವೇ ನಿರ್ದೇಶಿಸಿದ್ದು, ಗ'ಣ'ೇಶ'ೋ'ತ'್ಸ ವ'ದ' ವೈಭವದೊಂದಿಗೆ ಮಾನವೀಯ



ಸಂಬಂಧಗಳು ಮತ್ತು ಭಾವನಾತ್ಮಕ ಸನ್ನಿವೇಶಗಳನ್ನು ಕಥೆಯ ಪ್ರಮುಖ ಅಂಶಗಳಾಗಿ ಕಟ್ಟಿಕೊಡಲಾಗಿದೆ ಎಂದರು.

ಕಲ್ಯಾಣ ಕರ್ನಾಟಕದ ಸಂಸ್ಕೃತಿ, ಹಬ್ಬದ ಸಂಭ್ರಮ ಹಾಗೂ ಮಾನವೀಯ ಮೌಲ್ಯಗಳನ್ನು ಚಿತ್ರದಲ್ಲಿ ವಿಭಿನ್ನವಾಗಿ ತೋರಿಸುವ ಪ್ರಯತ್ನ ಮಾಡಲಾಗಿದೆ. ರಾಯಚೂರು ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ಸಿನಿಪ್ರೇಮಿಗಳಿಗೆ ಚಿತ್ರ ವಿಶೇಷ ಅನುಭವ ನೀಡಲಿದೆ ಎಂದು ಹೇಳಿದರು.

ಸೆ.13ರಂದು ಸಂಜೆ 5 ಗಂಟೆಗೆ ನಗರದ ಪೂರ್ಣಿಮಾ ಥಿಯೇಟರ್ ನಲ್ಲಿ ಟ್ರೈಲರ್ ಬಿಡುಗಡೆ ಸಮಾರಂಭ ನಡೆಯಲಿದ್ದು,

ಚಿತ್ರತಂಡ, ಕಲಾವಿದರು ಹಾಗೂ ಸಿನಿಪ್ರೇಮಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಜೋಳ ಮಾರಿದ ರೈತರಿಗೆ ವರ್ಷವಾದರೂ ಹಣವಿಲ್ಲ!

ಸೆ.15ರಂದು ಹೆದ್ದಾರಿ ತಡೆ: ಅಮೀನ್‌ಪಾಷಾ ದಿದ್ದಿಗಿ

ರಾಯಚೂರು,ಸೆ.12–

ಜಿಲ್ಲೆಯ ವಿವಿಧ ಖರೀದಿ ಕೇಂದ್ರಗಳಿಗೆ ಹಿಂಗಾರು ಜೋಳ ಮಾರಾಟ ಮಾಡಿ ಒಂದು ವರ್ಷ ಕಳೆದರೂ ರೈತರ ಖಾತೆಗಳಿಗೆ ಹಣ ಜಮೆಯಾಗಿಲ್ಲ. 5 ಸಾವಿರಕ್ಕೂ ಹೆಚ್ಚು ರೈತರಿಗೆ ಬಾಕಿ ಇರುವ ಸುಮಾರು ₹130 ಕೋಟಿ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು. ಇಲ್ಲವಾದರೆ ಸೆ.15ರಂದು ಪೋತ್ನಾಳ ಗ್ರಾಮದಲ್ಲಿ ರಾಜ್ಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಅಮೀನ್ ಪಾಷಾ ದಿದ್ದಿಗಿ ಎಚ್ಚರಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶನಿ



ವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೋಳ ಖರೀದಿಸಿದ 15 ದಿನಗಳೊಳಗೆ ರೈತರ ಖಾತೆಗಳಿಗೆ ಹಣ ಪಾವತಿಸುವುದಾಗಿ ಸರ್ಕಾರ ಭರವಸೆ ನೀಡಿತ್ತು. ಆದರೆ, ವರ್ಷ ಕಳೆದರೂ ಹಣ ಪಾವತಿಯಾಗಿಲ್ಲ. ಇದರಿಂದ ರೈತರು ಕೃಷಿ ವೆಚ್ಚ ಹಾಗೂ ಕುಟುಂಬದ ಅಗತ್ಯಗಳನ್ನು ಪೂರೈಸಲು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ ಎಂದು ಹೇಳಿದರು.

3 ನೇ ಪುಟಕ್ಕೆ...

ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ್ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್, ಸಚಿವ ಅಜಯ್ ಸಿಂಗ್ ಭೇಟಿ ಮಾಡಿದ ಕೆ. ಶಾಂತಪ್ಪ







ಬೆಂಗಳೂರು,ಸೆ.12–

ರಾಯಚೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಕೆ. ಶಾಂತಪ್ಪ ಅವರು ಮಾಜಿ ಸಚಿವ ಹಾಗೂ ವಿಧಾನ ಪರಿಷತ್ ಸದಸ್ಯ ಎನ್.ಎಸ್. ಬೋಸರಾಜು ಅವರೊಂದಿಗೆ ಬೆಂಗಳೂರಿನಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ, ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಚಿವ ಡಾ. ಅಜಯ್ ಸಿಂಗ್ ಅವರನ್ನು ಭೇಟಿಯಾಗಿ ಪುಷ್ಪಗುಚ್ಛ ನೀಡಿ ಅಭಿನಂದನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹಾಗೂ ಸಚಿವ ಡಾ. ಅಜಯ್ ಸಿಂಗ್ ಅವರು ನೂತನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೆ. ಶಾಂತಪ್ಪ ಅವರಿಗೆ ಶುಭ ಹಾರೈಸಿ, ರಾಯಚೂರು ಜಿಲ್ಲೆಯಲ್ಲಿ ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಒಗ್ಗಟ್ಟಿನಿಂದ ಹಾಗೂ ಸಂಘಟನಾತ್ಮಕವಾಗಿ ಕಾರ್ಯನಿರ್ವಹಿಸುವಂತೆ ಸಲಹೆ ನೀಡಿದರು.

ಪಕ್ಷದ ತತ್ವ, ಸಿದ್ಧಾಂತ ಹಾಗೂ ರಾಜ್ಯ ಸರ್ಕಾರದ ಜನಪರ ಯೋಜನೆಗಳನ್ನು ಜನರಿಗೆ ತಲುಪಿಸುವ ಮೂಲಕ ಕಾಂಗ್ರೆಸ್ ಪಕ್ಷವನ್ನು ತಳ ಮಟ್ಟದಿಂದ ಮತ್ತಷ್ಟು ಬಲಪಡಿಸಬೇಕು. ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಎಲ್ಲರನ್ನು ಒಗ್ಗೂಡಿಸಿಕೊಂಡು ಪಕ್ಷದ ಸಂಘಟನೆಗೆ ಆದ್ಯತೆ ನೀಡುವಂತೆ ಮುಖಂಡರು ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ ಸಚಿವ ಡಾ. ಅಜಯ್ ಸಿಂಗ್ ಅವರು ಕೆ. ಶಾಂತಪ್ಪ ಅವರನ್ನು ಸನ್ಮಾನಿಸಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ರಾಯಚೂರು ಲೋಕಸಭಾ ಕ್ಷೇತ್ರದ ಸಂಸದ ಜಿ. ಕುಮಾರ ನಾಯಕ್, ಮಸ್ಕಿ ಶಾಸಕ

3 ನೇ ಪುಟಕ್ಕೆ...

ಗೌರಿ ಗಣೇಶ ಹಬ್ಬಕ್ಕೆ ಸಿಹಿ ಸುದ್ದಿ: ಸಾರ್ವಜನಿಕರ ಪ್ರಯಾಣಕ್ಕೆ 2,400 ಹೆಚ್ಚುವರಿ ಬಸ್‌ಗಳ ವ್ಯವಸ್ಥೆ

ಬೆಂಗಳೂರು ,ಸೆ.12–

ಗೌರಿ – ಗಣೇಶ ಹಬ್ಬದ ಸಾಲು ಸಾಲು ರಜೆಗಳ ಹಿನ್ನೆಲೆಯಲ್ಲಿ ಸ್ವಂತ ಊರುಗಳಿಗೆ ತೆರಳುವ ಪ್ರಯಾಣಿಕರ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಕಲ್ಪಿಸಿದೆ. ಹಬ್ಬದ ಪ್ರಯುಕ್ತ ಬೆಂಗಳೂರಿನಿಂದ ವಿವಿಧ ಜಿಲ್ಲೆಗಳಿಗೆ ಹಾಗೂ ನೆರೆ ರಾಜ್ಯಗಳಿಗೆ ಒಟ್ಟು 2,400 ಹೆಚ್ಚುವರಿ ವಿಶೇಷ ಬಸ್‌ಗಳ ಸಂಚಾರ ಆರಂಭಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಮಾಧ್ಯಮ ಪ್ರಕಟಣೆ ಹೊರಡಿಸಿದೆ.

ಸೆಪ್ಟೆಂಬರ್ 11ರಿಂದ ವಿಶೇಷ ಬಸ್‌ಗಳ ವ್ಯವಸ್ಥೆ ಆರಂಭವಾಗಿದ್ದು 12 ಹಾಗೂ 13ರವರೆಗೂ ಬೆಂಗಳೂರಿನಿಂದ ರಾಜ್ಯ ಹಾಗೂ ಹೊರ ರಾಜ್ಯಗಳಿಗೆ ಸಂಚರಿಸಲಿವೆ. ಮೆಜೆಸ್ಟಿಕ್‌ನ ಕೆಂಪೇಗೌಡ ಬಸ್ ನಿಲ್ದಾಣದಿಂದ ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣ ಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾ ವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲ್ಬುರ್ಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್ ಮುಂತಾದ ಕಡೆಗಳಿಗೆ ಬಸ್‌ಗಳು ಲಭ್ಯವಿರಲಿವೆ. ಇದರ ಜೊತೆಗೆ ತಿರುಪತಿ, ವಿಜಯವಾಡ, ಹೈದರಾಬಾದ್ ಮುಂತಾದ ಪ್ರಮುಖ ಸ್ಥಳಗಳಿಗೂ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ.

ಮೈಸೂರು ರಸ್ತೆಯ ಬಸ್ ನಿಲ್ದಾಣದಿಂದ ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ ಹಾಗೂ ಮಡಿಕೇರಿ ಮಾರ್ಗವಾಗಿ ವಿಶೇಷ ಬಸ್‌ಗಳು ಸಂಚರಿಸಲಿವೆ. ಅಲ್ಲದೇ, ಶಾಂತಿನಗರದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ () ಬಸ್ ನಿಲ್ದಾಣದಿಂದ ತಮಿಳುನಾಡು ಮತ್ತು ಕೇರಳ ಕಡೆಗೆ ಅಂದರೆ ಮಧುರೈ, ಕುಂಭಕೋಣಂ, ಚೆನ್ನೈ, ಕೊಯಮತ್ತೂರ್ ತಿರುಚ್ಚಿ, ಪಾಲಕ್ಕಾಡ್, ತ್ರಿಶೂರ್ ಎರ್ನಾಕುಲಂ ಹಾಗೂ ಕೋಝಿಕ್ಕೋಡ್ ಮುಂತಾದ ನಗರಗಳಿಗೆ ಪ್ರತ್ಯೇಕ ಬಸ್‌ಗಳು ಹೊರಡಲಿವೆ. ಹಬ್ಬ ಮುಗಿದ ನಂತರ ಸೆಪ್ಟೆಂಬರ್ 14ರಂದು ರಾಜ್ಯ

3 ನೇ ಪುಟಕ್ಕೆ...



ರಾಯಚೂರು ಜಿಲ್ಲೆಯ ಹಿಂದುಳಿದ ವರ್ಗದ ಪ್ರಭಾವಿ ನಾಯಕ ಮತ್ತು ಕಾಂಗ್ರೆಸ್ ಹಿರಿಯ ಧುರೀಣರಾದ ಕೆ.ಶಾಂತಪ್ಪ ಇವರಿಗೆ ಪಕ್ಷದ ಜಿಲ್ಲಾಧ್ಯಕ್ಷ ಸ್ಥಾನ ನೀಡಿರುವುದಕ್ಕೆ ಇಂದು ಜಿಲ್ಲಾ ಕಾಂಗ್ರೆಸ್ ಯುವ ಮುಖಂಡರು ಶಾಲು ಹೊಧಿಸಿ, ಹೂಮಾಲೆ ಹಾಕಿ ಕೆ ಶಾಂತಪ್ಪ ಅವರಿಗೆ ಆತ್ಮೀಯವಾಗಿ ಸನ್ಮಾನಿಸಿದರು.

ಕೆ. ಶಾಂತಪ್ಪ ಅವರು ಪಕ್ಷ ನಿಷ್ಠರಾಗಿದ್ದಾರೆ. ಪ್ರಜಾತಂತ್ರ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದಾರೆ. ಸಂವಿಧಾನ ಬಲ್ಲವರಾಗಿದ್ದಾರೆ. ಹಲವಾರು ದಶಕಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಕಾರ್ಯಕರ್ತರಾಗಿ ಪಕ್ಷ ಸಂಘಟಿಸಿ, ನಂತರ ವಿವಿಧ ಹುದ್ದೆಗಳನ್ನು ನಿರ್ವಹಿಸಿ ಪಕ್ಷವನ್ನು ಬಲವಾಗಿ ಕಟ್ಟಿದ್ದಾರೆ.ಇಂತಹ ನಾಯಕರಿಗೆ ಜಿಲ್ಲಾಧ್ಯಕ್ಷ ಸ್ಥಾನ ನೀಡಿರುವುದಕ್ಕೆ ಕಾರ್ಯಕರ್ತರು ಸಂತಸದಲ್ಲಿದ್ದಾರೆ ಎಂದು ಪಕ್ಷದ ಯುವ ಮುಖಂಡರು ಮತ್ತು ಜಂಬಲದಿನ್ನಿ ಸರ್ಕಾರಿ ಶಾಲೆಯ ಶಾಲಾ ಮೇಲಸ್ತುವಾರಿ ಮತ್ತು ಅಭಿವೃದ್ಧಿ ಸಮಿತಿ ಅಧ್ಯಕ್ಷರು ಯು.ಗೋಪಾಲ ಮತ್ತು ಜಿಲ್ಲೆ ಯುವ ಕಾಂಗ್ರೆಸ್ ಮುಖಂಡರಾದ ವೆಂಕಟೇಶ್ ಜಂಬಲದಿನ್ನಿ ಅವರು ತಿಳಿಸಿ, ಹೃತ್ಪೂರ್ವ



ಭಾರತೀಯ ಜನತಾ ಪಕ್ಷದ ನಿಷ್ಠಾವಂತ ಕಾರ್ಯಕರ್ತ, ರಾಯಚೂರು ನಗರ ಕ್ಷೇತ್ರದ ಜನಪ್ರಿಯ ಶಾಸಕರಾದ ಡಾ. ಶ್ರೀವರಾಜ ಪಾಟೀಲ್ ಅವರ ಆಪ್ತರಾಗಿರುವ ಪ್ರಾಣೇಶ್ ದೇವನಪಲ್ಲಿ ಇವರಿಗೆ ಬಿಜೆಪಿ ಪಕ್ಷದ ನಗರ ಮಂಡಲ ಹಿಂದುಳಿದ ಮೋರ್ಚಾದ ಕೋಶಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಹಿಂದುಳಿದ ಮೋರ್ಚಾದ ಅಧ್ಯಕ್ಷರಾದ ಯು. ಆಂಜನೇಯ ಅವರು ಇವರನ್ನು ನೇಮಿಸಿ ಆದೇಶ ಹೊರಡಿಸಿದ್ದಾರೆ. ನಗರ ಕ್ಷೇತ್ರದ ಶಾಸಕರಾದ ಡಾ. ಶಿವರಾಜ ಪಾಟೀಲ್ ಅವರು ಇವರನ್ನು ನೇಮಿಸುವಂತೆ ಶಿಫಾರಸ್ಸು ಮಾಡಿದ್ದರು.

ಈ ತಕ್ಷಣ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಳ್ಳಲು ಮತ್ತು ಪಕ್ಷದ ಬಲವರ್ಧನೆಗೆ ಶ್ರಮಿಸುವಂತೆ ಆದೇಶ ಪತ್ರದಲ್ಲಿ ತಿಳಿಸಲಾಗಿದೆ. ಆದೇಶ ಪತ್ರವನ್ನು ಪಕ್ಷದ ಕಾರ್ಯಾಲಯದಲ್ಲಿ ಶಾಸಕ ಶಿವರಾಜ ಪಾಟೀಲ್ ಅವರು ನೀಡಿದರು. ಈ ಸಂದರ್ಭದಲ್ಲಿ ಪಕ್ಷದ ರಾಯಚೂರ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷರಾದ ವಿಜಯರಾಜೇಶ್ವರಿ ಗೋಪಿಶೆಟ್ಟಿ, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ತಿಮ್ಮಪ್ಪ ನಾಡಗೌಡ, ಕಡಗೋಲ ಆಂಜನೇಯ ಮತ್ತು ನಗರ ಮೋರ್ಚಾ ಅಧ್ಯಕ್ಷರಾದ ರಾಘವೇಂದ್ರ ಊಟ್ಕೂರ, ಯು ಆಂಜನೇಯ ಇತರರು ಇದ್ದರು.

ಕಾರು - ಟ್ರಕ್ ಮುಖಾಮುಖಿ ಡಿಕ್ಕಿ: ಐವರು ಯುವಕರ ದಾರುಣ ಸಾವು

ಸೋನಿತ್‌ಪುರ (ಅಸ್ಸಾಂ):

ಕಾರು ಹಾಗೂ ಟ್ರಕ್ ಮುಖಾಮುಖಿ ಡಿಕ್ಕಿಯಾದ ಪರಿಣಾಮ ಕಾರಿನಲ್ಲಿ ಐವರು ಯುವಕರು ಸ್ಥಳದಲ್ಲೇ ಮೃತಪಟ್ಟ ದಾರುಣ ಘಟನೆ ಸೋನಿತ್‌ಪುರ ಜಿಲ್ಲೆಯ ಬಾಲಿಪಾರಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶುಕ್ರವಾರ ಮಧ್ಯರಾತ್ರಿ ಸಂಭವಿಸಿದೆ.

ಬಾಲಿಪಾರಾ ಸಮೀಪದ 'ಮೀಟ್ ಚಪ್ಲಿ'ಯ ನಯೇರಾ ಪೆಟ್ರೋಲ್ ಪಂಪ್ ಬಳಿ ಈ ಅಪಘಾತ ಸಂಭವಿಸಿದೆ. -04-2696 ನೋಂದಣಿ ಸಂಖ್ಯೆಯ ಟ್ರಕ್ ಹಾಗೂ -12--6300 ನೋಂದಣಿ ಸಂಖ್ಯೆಯ ಕಾರು

3 ನೇ ಪುಟಕ್ಕೆ...

ನೇಮಕ



ರಾಯಚೂರು,ಸೆ.12–

ಅಲ್ಪಸಂಖ್ಯಾತ ಹಿಂದುಳಿದ ದಲಿತ ಸಂಘಟನೆಯ ರಾಜ್ಯ ಸಂಚಾಲಕರಾಗಿ ರಾಯಚೂರಿನ ತಿಮ್ಮಾಪೂ ರ ಪೇಟ ನಿವಾಸಿ ಕಡಗೋಳ ಶರಣಪ್ಪ ಇವರು ನೇಮಕವಾಗಿದ್ದಾರೆ. ಸಂಘಟನೆಯ ಮುಖ್ಯ ಸಂಚಾಲಕರಾದ ಎಸ್. ಮೂರ್ತಿಯವರು ಇವರನ್ನು ನೇಮಿಸಿ ಆದೇಶ ಹೊರಡಿಸಿದ್ದಾರೆ. ಮುಂದಿನ ಆದೇಶ ಬರುವರೆಗೂ, ರಾಜ್ಯ ಸಂಚಾಲಕರಾಗಿ ಕಾರ್ಯನಿರ್ವಹಿಸಲಿದ್ದಾರೆ.

ಪ್ರವಾದಿ ಮುಹಮ್ಮದ್ ಅವರ ಬದುಕಿನ ಸಾಧನೆ ಮೇಲೆ ಬೆಳಕು ಚೆಲ್ಲಿದ ಮೇಜಿನ ಮಾತು



ಬೀದರ್,ಸೆ.12-

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಅರ್ಹತಾ ಅ.1 ಕ್ಕೆ ಸಂಬಂಧಿಸಿದಂತೆ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯ ಹಿನ್ನೆಲೆಯಲ್ಲಿ, ಆಯಾ ಕ್ಷೇತ್ರಗಳ ಮತದಾರರ ನೋಂದಣಾಧಿಕಾರಿ ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿಗಳ ಹಂತದಲ್ಲಿ ವಿಚಾರಣೆಗಳನ್ನು ನಡೆಸಿ ಕರಡು ಪಟ್ಟಿಯಲ್ಲಿನ ನ್ಯೂನತೆಗಳನ್ನು ವಿಲೇವಾರಿ ಮಾಡಲಾಗುತ್ತಿದೆ ಎಂದು ಅಪರ ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾ ಚುನಾವಣಾಧಿಕಾರಿ ಸುರೇಖಾ ಅವರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಆ.24 ರಂದು ಕರಡು ಮತದಾರರ ಪಟ್ಟಿ ಪ್ರಕಟಿಸಲಾಗಿದ್ದು, 2002ರ ಮತದಾರರ ಪಟ್ಟಿಗೆ ಹೋಲಿಸಿದಾಗ ಹೆಸರುಗಳಲ್ಲಿ ವ್ಯತ್ಯಾಸವಿರುವ ಹಾಗೂ ಮ್ಯಾಪಿಂಗ್ ಆಗದ ಒಟ್ಟು 32,666 ಮತದಾರರನ್ನು ಗುರುತಿಸಿ ನೋಟಿಸ್ ಜಾರಿ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ.

ಬಸವಕಲ್ಯಾಣ ಮತ ಕ್ಷೇತ್ರದಲ್ಲಿ ಒಟ್ಟು 3,093 ನೋಟಿಸ್‌ಗಳನ್ನು ಜಾರಿಗೊಳಿಸಲಾಗಿದ್ದು, ಇಗಾಗಲೇ 2,957 ನೋಟೀಸ್ ತಲುಪಿವೆ. 136 ವಿತರಣೆಗೆ ಬಾಕಿ ಇವೆ. 901 ವಿಚಾರಣೆಗಳು ಪೂರ್ಣಗೊಂಡಿದ್ದು, 1,051 ದಿನಾಂಕ ಮೀರಿದ ವಿಚಾರಣೆಗಳನ್ನು ಮರು ವೇಳಾಪಟ್ಟಿ ಮಾಡಬೇಕಿದೆ. ಹುಮನಾಬಾದ್ ಮತ ಕ್ಷೇತ್ರದಲ್ಲಿ ಒಟ್ಟು 5,049 ನೋಟಿಸ್‌ಗಳಲ್ಲಿ 4,358 ವಿತರಣೆಯಾಗಿದ್ದು, 691 ಬಾಕಿ ಇವೆ. 845 ವಿಚಾರಣೆಗಳು ಪೂರ್ಣಗೊಂಡಿದ್ದು, 992 ದಿನಾಂಕ ಮೀರಿದ ವಿಚಾರಣೆಗಳಿಗೆ ದಿನಾಂಕ ಮರು ನಿಗದಿಪಡಿಸಬೇಕಿದೆ. ಬೀದರ ದಕ್ಷಿಣ ಮತ ಕ್ಷೇತ್ರದಲ್ಲಿ ಒಟ್ಟು 2,459 ನೋಟಿಸ್‌ಗಳ ಪೈಕಿ 2,427 ತಲುಪಿದ್ದು, 32 ಬಾಕಿ ಇವೆ. 942 ವಿಚಾರಣೆಗಳು ಪೂರ್ಣಗೊಂಡಿದ್ದು, 944 ದಿನಾಂಕ ಮೀರಿದ ವಿಚಾರಣೆಗಳು ಹಾಗೂ 1 ಪ್ರಕರಣ ಮರು ವೇಳಾಪಟ್ಟಿಯಲ್ಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಬೀದರ್ ಮತ ಕ್ಷೇತ್ರದಲ್ಲಿ ಅತ್ಯಂತ ಹೆಚ್ಚು ಅಂದರೆ ಒಟ್ಟು 11,262 ನೋಟಿಸ್‌ಗಳಲ್ಲಿ 8,589 ವಿತರಣೆಯಾಗಿದ್ದು, 2,673 ಬಾಕಿ ಇವೆ. 2,128 ವಿಚಾರಣೆಗಳು ಪೂರ್ಣಗೊಂಡಿವೆ. 1,327 ದಿನಾಂಕ ಮೀರಿದ ವಿಚಾರಣೆಗಳು ಹಾಗೂ 1 ಮರು ವೇಳಾಪಟ್ಟಿಯಲ್ಲಿದೆ. ಭಾಲ್ಕಿ ಮತ ಕ್ಷೇತ್ರದಲ್ಲಿ ಒಟ್ಟು 5,835 ನೋಟಿಸ್‌ಗಳಲ್ಲಿ 4,976 ವಿತರಣೆಯಾಗಿದ್ದು, 860 ಬಾಕಿ ಇವೆ. 902 ವಿಚಾರಣೆಗಳು ಪೂರ್ಣಗೊಂಡಿದ್ದು, 806 ದಿನಾಂಕ ಮೀರಿದ ವಿಚಾರಣೆಗಳು ಹಾಗೂ 3 ದಿನಾಂಕ ಮರು ವೇಳಾಪಟ್ಟಿಯಲ್ಲಿವೆ. ಔರಾದ್ ಮತ ಕ್ಷೇತ್ರದಲ್ಲಿ ಒಟ್ಟು 4,968 ನೋಟಿಸ್‌ಗಳಲ್ಲಿ 3,886 ವಿತರಣೆಯಾಗಿದ್ದು, 1,082 ಬಾಕಿ ಇವೆ. 1,813 ವಿಚಾರಣೆಗಳು ಪೂರ್ಣಗೊಂಡಿದ್ದು, 2,977 ದಿನಾಂಕ ಮೀರಿದ ವಿಚಾರಣೆಗಳು ಹಾಗೂ 2 ಪ್ರಕರಣಗಳು ಮರು ವೇಳಾಪಟ್ಟಿಯಲ್ಲಿವೆ ಎಂದು ಅವರು ತಿಳಿಸಿದ್ದಾರೆ.

ಒಟ್ಟು ಜಿಲ್ಲಾದ್ಯಂತ 32,666 ನೋಟಿಸ್‌ಗಳನ್ನು ಜನರೇಟ್ ಮಾಡಲಾಗಿದ್ದು, 27,193 ತಲುಪಿಸಲಾಗಿದೆ. ಇನ್ನು 5,474 ತಲುಪಿಸುವುದು ಬಾಕಿ ಇವೆ. ಇದುವರೆಗೆ ಒಟ್ಟು 7,531 ವಿಚಾರಣೆಗಳು ಯಶಸ್ವಿಯಾಗಿ ಪೂರ್ಣಗೊಂಡಿವೆ. 8,097 ದಿನಾಂಕ ಮೀರಿದ ವಿಚಾರಣೆಗಳು ಮರು ವೇಳಾಪಟ್ಟಿಯಲ್ಲಿವೆ ಎಂದು ಅವರು ಮಾಹಿತಿ ನೀಡಿದ್ದಾರೆ.

ವಿಕಲಚೇತನರು ಮತ್ತು ಹಿರಿಯ ನಾಗರಿಕರಿಗೆ ಮನೆ ಬಾಗಿಲಿಗೆ ಸೇವೆ, ವಿಶೇಷ ಚೇತನರು ಹಾಗೂ ವಯೋವೃದ್ಧ ಮತದಾರರಿಗೆ ಅನುಕೂಲವಾಗುವಂತೆ, ಅಧಿಕಾರಿಗಳೇ ಸ್ವತಃ ಅವರ ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ ದಾಖಲೆಗಳನ್ನು ಪರಿಶೀಲಿಸಿ ವಿಚಾರಣೆ ನಡೆಸಿ ನೋಟಿಸ್‌ಗಳನ್ನು ವಿಲೇವಾರಿ ಮಾಡುತ್ತಿದ್ದಾರೆ. ಜನನ ದಿನಾಂಕಕ್ಕನುಗುಣವಾಗಿ ಸಲ್ಲಿಸಬೇಕಾದ ದಾಖಲೆಗಳು, ಸಾಮಾನ್ಯ ಮತದಾರರು ನೋಟಿಸ್‌ನಲ್ಲಿ ನೀಡಲಾದ ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ನಿಗದಿತ ಸ್ಥಳದಲ್ಲಿ ಹಾಜರಾಗಿ ಅರ್ಹತಾ ಮಾನದಂಡಕ್ಕೆ ತಕ್ಕಂತೆ ದಾಖಲೆ ಸಲ್ಲಿಸಬೇಕು ಎಂದು ಅವರು ಸೂಚನೆ ನೀಡಿದ್ದಾರೆ. ಜು.1, 1987 ಕ್ಕಿಂತ ಮೊದಲು ಜನಿಸಿದವರು, ತಮ್ಮ ಸ್ವಂತ ಜನ್ಮ ದಿನಾಂಕ ಅಥವಾ ಜನ್ಮ ಸ್ಥಳವನ್ನು ಸಾಬೀತುಪಡಿಸುವ ಯಾವುದಾದರೂ ಒಂದು ಸರ್ಕಾರಿ ಮಾನ್ಯತೆ ಪಡೆದ ದಾಖಲೆ, ಜು1, 1987 ರಿಂದ ಡಿ.2, 2004ರ ನಡುವೆ ಜನಿಸಿದವರು ತಮ್ಮ ಸ್ವಂತ ದಾಖಲೆಯೊಂದಿಗೆ ತಂದೆ ಅಥವಾ ತಾಯಿಯ ಜನ್ಮ ದಿನಾಂಕ, ಸ್ಥಳದ ದಾಖಲೆ ನೀಡಬೇಕು. ಡಿ.2, 2004ರ ನಂತರ ಜನಿಸಿದವರು ಸ್ವಂತ ದಾಖಲೆಯ ಜೊತೆಗೆ ತಂದೆ ಮತ್ತು ತಾಯಿ ಇಬ್ಬರ ಜನ್ಮ ದಿನಾಂಕ, ಸ್ಥಳದ ದಾಖಲೆಗಳು (ಪೋಷಕರು ವಿದೇಶಿಯರಾಗಿದ್ದರೆ ಅವರ ಪಾಸ್‌ಪೋರ್ಟ್ ಹಾಗೂ ವೀಸಾ ಪ್ರತಿ) ಸಲ್ಲಿಸಬೇಕು. ವಿದೇಶದಲ್ಲಿ ಜನಿಸಿದವರು, ಭಾರತೀಯ ಮಿಷನ್ ನೀಡಿರುವ ಜನ್ಮ ನೋಂದಣಿ ಪ್ರಮಾಣಪತ್ರ ಸಲ್ಲಿಸಬೇಕು.

ಮಾನ್ಯ ಮಾಡಲಾಗುವ ಪ್ರಮುಖ ದಾಖಲೆಗಳು: ಸರ್ಕಾರಿ ಉದ್ಯೋಗಿ ಐಡಿ, ಪಿಂಚಣಿ ಆದೇಶ, ಜನನ ಪ್ರಮಾಣಪತ್ರ, ಪಾಸ್‌ಪೋರ್ಟ್, ಶೈಕ್ಷಣಿಕ ಪ್ರಮಾಣಪತ್ರ, ಶಾಶ್ವತ ನಿವಾಸ ಪ್ರಮಾಣಪತ್ರ, ಜಾತಿ ಪ್ರಮಾಣಪತ್ರ, ಅರಣ್ಯ ಹಕ್ಕು ಪ್ರಮಾಣ ಪತ್ರ, ಜಮೀನು ಅಥವಾ ಮನೆ ಹಂಚಿಕೆ ಪ್ರಮಾಣಪತ್ರ ಹಾಗೂ ಚುನಾವಣಾ ಆಯೋಗದ ನಿರ್ದೇಶನದಂತೆ ಆಧಾರ್ ಕಾರ್ಡ್.

ಹೊಸ ಹೆಸರು ಸೇರ್ಪಡೆಗೆ ಸೆ. 23 ಕೊನೆಯ ದಿನ, ಕರಡು ಪಟ್ಟಿಯಲ್ಲಿ ಹೆಸರು ಬಿಟ್ಟು ಹೋಗಿರುವ ಅರ್ಹ ಮತದಾರರು ಆಕ್ಷೇಪಣೆ ಸಲ್ಲಿಸಲು ಅಥವಾ ಹೊಸದಾಗಿ ಹೆಸರು ಸೇರಿಸಲು ಅ.24 ರಿಂದ ಅ.23, 2026ರ ವರೆಗೆ ಅವಕಾಶ ನೀಡಲಾಗಿದೆ.

ಅಗತ್ಯ ಮೂಲ ದಾಖಲೆಗಳೊಂದಿಗೆ ನಮೂನೆ-6 ಹಾಗೂ ಡಿಕ್ಲೇರೇಶನ್ ಫಾರ್ಮ್ ಭರ್ತಿ ಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಬಹುದು. ಆನ್‌ಲೈನ್ ಸೌಲಭ್ಯ ಆಸಕ್ತರು ಸೇವಾ ಪೋರ್ಟಲ್ ಮೂಲಕವೂ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಸಲ್ಲಿಕೆಯಾದ ಅರ್ಜಿಗಳನ್ನು ಅ.22, 2026 ರ ಒಳಗಾಗಿ ವಿಲೇವಾರಿ ಮಾಡಿ, ಅ.27 ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.



ಐದು ದಿನಗಳ ಬ್ಯಾಂಕಿಂಗ್ ವಾರ ಜಾರಿಗೆ ಆಗ್ರಹಿಸಿ ಮುಷ್ಕರ

ಬೀದರ್ ,ಸೆ.12-

ಐದು ದಿನಗಳ ಬ್ಯಾಂಕಿಂಗ್ ಕೆಲಸದ ವಾರ ಜಾರಿಗೆ ತರಬೇಕು. ಹೊಸದಾಗಿ ಜಾರಿಗೆ ತಂದಿರುವ ಕಾರ್ಯಕ್ಷಮತೆ ಆಧಾರಿತ ಪ್ರೋತ್ಸಾಹ ಧನ ಯೋಜನೆಯನ್ನು ಹಿಂಪಡೆಯಬೇಕು ಹಾಗೂ ಬ್ಯಾಂಕ್ ಸಿಬ್ಬಂದಿ ಮತ್ತು ಅಧಿಕಾರಿಗಳ ಹಕ್ಕುಗಳನ್ನು ರಕ್ಷಿಸಬೇಕು ಎಂದು ಆಗ್ರಹಿಸಿ ಯುನೈಟೆಡ್ ಫೋರಂ ಆಫ್ ಬ್ಯಾಂಕ್ ಯೂನಿಯನ್ಸ್ ನೇತೃತ್ವದಲ್ಲಿ ರಾಷ್ಟ್ರವ್ಯಾಪಿ ಒಂದು ದಿನದ ಮುಷ್ಕರಕ್ಕೆ ಬೆಂಬಲಿಸಿ ನಗರದಲ್ಲಿ ಬ್ಯಾಂಕ್ ಸಿಬ್ಬಂದಿ ಹಾಗೂ ಅಧಿಕಾರಿಗಳಿಂದ ಶುಕ್ರವಾರ ಮುಷ್ಕರ್ ನಡೆಯಿತು. ಶಿವಾಜಿ ವೃತ್ತದಲ್ಲಿರುವ ಎಸ್‌ಬಿಐ ಬ್ಯಾಂಕ್‌ನಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿ, ಹರಳಯ್ಯ ವೃತ್ತ, ಅಂಬೇಡ್ಕರ್ ವೃತ್ತ, ಭಗತ್‌ಸಿಂಗ್ ವೃತ್ತದ ಮೂಲಕ ಸಾಗಿದ ಮೆರವಣಿಗೆ ಎಸ್‌ಬಿಐ ಬ್ಯಾಂಕ್ ಸಮೀಪ ಮುಕ್ತಾಯಗೊಂಡಿತು.

ಈ ವೇಳೆ ಯುಎಫ್‌ಬಿಯು ಬೀದರ ಘಟಕದ ಸಂಚಾಲಕ ರಮೇಶ ಶಿಂದೆ ಅವರು ಮಾತನಾಡಿ, ಬ್ಯಾಂಕ್ ಸಿಬ್ಬಂದಿ ಮತ್ತು ಅಧಿಕಾರಿಗಳ ಬಹುದಿನಗಳ ಪ್ರಮುಖ ಬೇಡಿಕೆಯಾಗಿರುವ ಐದು ದಿನಗಳ ಬ್ಯಾಂಕಿಂಗ್ ಕೆಲಸದ ವಾರವನ್ನು ಯಾವುದೇ ವಿಳಂಬವಿಲ್ಲದೆ ಜಾರಿಗೆ ತರಬೇಕು. ವಾರದ ಆರು ದಿನಗಳ ಕೆಲಸದ ಬದಲಾಗಿ ಐದು ದಿನಗಳ ಕೆಲಸದ ವಾರ ಜಾರಿಯಾದರೆ ಸಿಬ್ಬಂದಿಗೆ ಉತ್ತಮ ಕೆಲಸ-ಜೀವನ ಸಮತೋಲನ ದೊರೆಯುವುದರ ಜೊತೆಗೆ ಬ್ಯಾಂಕಿಂಗ್ ಕ್ಷೇತ್ರದ ಕಾರ್ಯಕ್ಷಮತೆಯೂ ಹೆಚ್ಚಲಿದೆ ಎಂದರು.

ಹೊಸದಾಗಿ ಜಾರಿಗೆ ತಂದಿರುವ ಕಾರ್ಯಕ್ಷಮತೆ ಆಧಾರಿತ ಪ್ರೋತ್ಸಾಹ ಧನ (ಪಿಎಲ್‌ಐ) ಯೋಜನೆಯು ತಾರತಮ್ಯಕ್ಕೆ ಕಾರಣವಾಗುವ ಸಾಧ್ಯತೆ ಇರುವುದರಿಂದ ಅದನ್ನು ತಕ್ಷಣವೇ ತಿರಸ್ಕರಿಸಬೇಕು. ಬ್ಯಾಂಕ್ ಸಿಬ್ಬಂದಿ ಮತ್ತು ಅಧಿಕಾರಿಗಳ ನಡುವೆ ವಿಭಜನೆ ಉಂಟುಮಾಡುವ ಏಕಪಕ್ಷೀಯ ಕ್ರಮಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಉದ್ಯಮ ಮಟ್ಟದ ಸಾಮೂಹಿಕ ಮಾತುಕತೆಯ ವ್ಯವಸ್ಥೆಯನ್ನು ರಕ್ಷಿಸಬೇಕು. ಟ್ರೇಡ್ ಯೂನಿಯನ್ ಹಕ್ಕುಗಳಿಗೆ ಗೌರವ ನೀಡುವ ಜೊತೆಗೆ ಬ್ಯಾಂಕ್ ಆಡಳಿತ ಮತ್ತು ಸಿಬ್ಬಂದಿ ಸಂಘಟನೆಗಳ ನಡುವೆ ಅರ್ಥಪೂರ್ಣ ಸಂವಾದ ನಡೆಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಈ ಮುಷ್ಕರದಲ್ಲಿ ಶೇಷಿಕಾಂತ್ ಕಾಳೆ, ಪರಮೇಶ್ ರೆಡ್ಡಿ, ವಿಷ್ಣುಕಾಂತ್ ಫತ್ತೇಪೂರೆ, ಚಂದ್ರಶೇಖರ್ ಖಿನಗೊಂಡ, ಸಂತೋಷ್ ಫರ್ಮಾ, ವಿಶ್ವಭೂಷಣ, ಪವನ್ ಪೂಜಾರಿ, ಚಂದ್ರಶೇಖರ್, ಸಚಿನ್, ಅಶೋಕ್ ಮಾಲಿ ಬಿರಾದಾರ್, ಪ್ರಭಾರ್ಕ್ರ ಸದಾನಂದ್, ಪ್ರಶಾಂತ್, ದೀಪಿಕಾ ಮೋರೆ, ಸುನೀತಾ ಬಚ್ಚಾ, ಡಯಾನಾ, ಸಂಗೀತಾ, ಬಾಶಾ, ರಾಘವೇಂದ್ರ, ಅನಿತಾ, ದಶರಥ್, ಸೋಮನಾಥ್, ಸುಮೀತ್, ಪರಮೇಶ್ವರ್, ಸೀತಾ, ವಿಶ್ವ, ಸೂರ್ಯಪ್ರಕಾಶ್, ಶ್ರೀನಿವಾಸ್, ಸುನೀಲಕುಮಾರ್, ಸಂತೋಷಕುಮಾರ್, ನಾರಾಯಣ ದೇಶಪಾಂಡೆ, ಪವನ್ ಕಾಂಬಳೆ, ಶಾಮ್, ಸುರೇಶ್ ಬಾಬು ಹಾಗೂ ಕಿರಣ್ ಕುಂದೆ ಸೇರಿದಂತೆ ವಿವಿಧ ರಾಷ್ಟ್ರೀಕೃತ ಬ್ಯಾಂಕ್‌ಗಳ ಸಿಬ್ಬಂದಿ ಹಾಗೂ ಅಧಿಕಾರಿಗಳು ಪಾಲ್ಗೊಂಡಿದ್ದರು.



ಭಾಲ್ಕಿ ವಿಘ್ನವಿಲ್ಲದೆ ಗಣೇಶೋತ್ಸವ ಆಚರಿಸಿ: ಡಿವೈಎಸ್ಪಿ ಬಲ್ಲಪ್ಪ ನಂದಗಾವೆ

ಭಾಲ್ಕಿ,ಸೆ.12-

ವಿನಾಯಕನ ಹಬ್ಬವನ್ನು ಶಾಂತಿ, ಸೌಹಾರ್ದತೆ ಮತ್ತು ಯಾವುದೇ ವಿಘ್ನವಿಲ್ಲದೆ ಆಚರಿಸಬೇಕು ಎಂದು ಭಾಲ್ಕಿ ಡಿವೈಎಸ್ಪಿ ಬಲ್ಲಪ್ಪ ನಂದಗಾವೆ ಹೇಳಿದರು.

ಪಟ್ಟಣದ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಗುರುವಾರ ಮೆಹಕರ್, ಧನ್ನೂರ್ (ಹೆಚ್) ಹಾಗೂ ಖಟಕಚಿಂಚೋಳಿ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳ ಗಣೇಶೋತ್ಸವ ಸಮಿತಿಗಳ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗಣೇಶನನ್ನು ವಿಘ್ನವಿನಾಯಕ ಎಂದು ಕರೆಯಲಾಗುತ್ತದೆ. ಆದ್ದರಿಂದ ಗಣೇಶೋತ್ಸವದಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಹಬ್ಬವನ್ನು ಸಂಭ್ರಮದಿಂದ ಆಚರಿಸಬೇಕು. ಗಣೇಶೋತ್ಸವವು ಸ್ವಾತಂತ್ರ್ಯ ಚಳವಳಿಯ ಭಾಗವಾಗಿ ಆರಂಭಗೊಂಡಿದ್ದು, ಎಲ್ಲರಿಗೂ ಹಬ್ಬವನ್ನು ಆಚರಿಸುವ ಹಕ್ಕಿದೆ. ಉತ್ಸವವನ್ನು ಉತ್ತಮ ರೀತಿಯಲ್ಲಿ ನಡೆಸಲು ಎಲ್ಲಾ ಇಲಾಖೆಗಳು ಸಹಕಾರ ನೀಡಲಿವೆ ಎಂದು ಹೇಳಿದರು.

ಅಗ್ನಿಶಾಮಕ ಠಾಣೆ ಅಧಿಕಾರಿ ದತ್ತಾತ್ರಿ ಮಾತನಾಡಿ, ಎಲ್ಲ ಗಣೇಶ ಪೆಂಡಾಲ್‌ಗಳಲ್ಲಿ ಅಗ್ನಿ ನಿರೋಧಕ ವ್ಯವಸ್ಥೆ ಕಡ್ಡಾಯವಾಗಿ ಅಳವಡಿಸಬೇಕು. ಅಗ್ನಿ ಅವಘಡಗಳು ಹೆಚ್ಚಾಗಿ ನಿರ್ಲಕ್ಷ್ಯದಿಂದಲೇ ಸಂಭವಿಸುವುದರಿಂದ ಸಮಿತಿಯವರು ಎಚ್ಚರಿಕೆಯಿಂದ ಹಬ್ಬ ಆಚರಿಸಬೇಕು ಎಂದು ಸಲಹೆ ನೀಡಿದರು.

ತಹಶೀಲ ಕಚೇರಿಯ ಶಿರಸ್ತೆದಾರ ಗೋಪಾಲ್ ಹಿಪ್ಪರಗಿ ಮಾತನಾಡಿ, ಪ್ರತಿ ಗಣೇಶೋತ್ಸವ ಸಮಿತಿಯೂ ತಮ್ಮ ಪೆಂಡಾಲ್‌ಗೆ ಸಂಬಂಧಿಸಿದಂತೆ ಶಾಂತಿ ಸಭೆ ನಡೆಸಿ ಜವಾಬ್ದಾರಿಗಳನ್ನು ಹಂಚಿಕೊಳ್ಳಬೇಕು. ಯಾವುದೇ ಅವಘಡ ಅಥವಾ ವಿವಾದ ಸಂಭವಿಸಿದರೆ ಕಾನೂನನ್ನು ಕೈಗೆತ್ತಿಕೊಳ್ಳದೆ ಪೊಲೀಸರ ಸಹಾಯ ಪಡೆಯಬೇಕು ಎಂದು ತಿಳಿಸಿದರು.

ಸಭೆಯಲ್ಲಿ ತಾಲೂಕು ಪಂಚಾಯತ್ ಸಹಾಯಕ ನಿರ್ದೇಶಕ ಸೂರ್ಯಕಾಂತ್ ಬಿರಾದಾರ್, ಗ್ರಾಮೀಣ ವೃತ್ತ ನಿರೀಕ್ಷಕ ಹನುಮರೆಡ್ಡೆಪ್ಪ, ಪಿಎಸ್‌ಐ ಅಶೋಕ್ ಪಾಟೀಲ್, ಮೆಹಕರ್ ಪಿಎಸ್‌ಐ ಸುದರ್ಶನ್ ರೆಡ್ಡಿ, ಖಟಕಚಿಂಚೋಳಿ ಪಿಎಸ್‌ಐ ವಿಶ್ವಾರಾಧ್ಯ ಫಾಣೂರ್, ಧನ್ನೂರ್(ಹೆಚ್) ಪಿಎಸ್‌ಐ ರಾಜಕುಮಾರ್ ಜಾಮಗೊಂಡ, ಜೆಸ್ಕಾಂನ ಸತೀಶಕುಮಾರ್ ಹಾಗೂ ಪುರಸಭೆ ಉಪಾಧ್ಯಕ್ಷ ವಿಜಯಕುಮಾರ್ ರಾಜಭವನ ಉಪಸ್ಥಿತರಿದ್ದರು. ಸಿಪಿಐ ಹನುಮರೆಡ್ಡಿ ಸ್ವಾಗತಿಸಿದರು. ಸಿ.ಜಿ.ಬಿರಾದಾರ್ ನಿರೂಪಿಸಿದರು. ಮಹೇಶ್ ವಂದಿಸಿದರು.

ಅರಣ್ಯ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ: ನ್ಯಾಯಾಧೀಶ ಎನ್.ವಿ.ವಿಜಯ

ಧಾರವಾಡ ,ಸೆ.12-

ನ್ಯಾಯಾಂಗ ಇಲಾಖೆ ಹಾಗೂ ಅರಣ್ಯ ಇಲಾಖೆಗೆ ಬಹಳ ಹತ್ತಿರದ ಸಂಬಂಧವಿದೆ. ಅರಣ್ಯ ಸಂರಕ್ಷಣೆ ಮಾಡುವುದು ಸರ್ವೋಚ್ಚ ನ್ಯಾಯಾಲಯ ಹಾಗೂ ನ್ಯಾಯಾಂಗ ಇಲಾಖೆಯ ಪ್ರಮುಖ ಉದ್ದೇಶವಾಗಿದೆ. ಅರಣ್ಯ ಸಂರಕ್ಷಣೆ ವಿಚಾರವಾಗಿ ನ್ಯಾಯಾಂಗ ಇಲಾಖೆಯಿಂದ ಹಲವು ತೀರ್ಪುಗಳನ್ನು ನೀಡಲಾಗಿದೆ ಎಂದು ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎನ್. ವಿ. ವಿಜಯ ಅವರು ಹೇಳಿದರು.

ಅವರು ಇಂದು (ಸೆ.11) ಬೆಳಿಗ್ಗೆ ನಗರದ ಕೆ.ಸಿ. ಪಾರ್ಕ ಹತ್ತಿರದ ಅರಣ್ಯ ಸಂಕೀರ್ಣ ಆವರಣದಲ್ಲಿ ಅರಣ್ಯ ಇಲಾಖೆ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ಉದ್ದೇಶಿಸಿ ಮಾತನಾಡಿದರು.

ಅರಣ್ಯ ಪ್ರದೇಶದಲ್ಲಿ ಸಂಚರಿಸುವಾಗ ಸಾರ್ವಜನಿಕರು ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳಬೇಕು.

ವಾಹನದಲ್ಲಿ ತೆರಳುವ ಸಂದರ್ಭದಲ್ಲಿ ಅರಣ್ಯ ಪ್ರದೇಶದಲ್ಲಿ ವಾಹನ ನಿಲ್ಲಿಸಿ, ವಿವಿಧ ಚಟುವಟಿಕೆಗಳನ್ನು ನಡೆಸುವುದರಿಂದ ತೊಂದರೆ ಉಂಟಾಗುವ ಸಾಧ್ಯತೆ ಇದೆ. ಅದರಲ್ಲೂ ಸಣ್ಣ ಬೆಂಕಿಯ ಕಿಡಿಯೊಂದು ಹುಲ್ಲಿಗೆ ತಗುಲಿದರೂ ಇಡೀ ಅರಣ್ಯ ಪ್ರದೇಶವನ್ನೇ ನಾಶಪಡಿಸುವಂತಹ ಪರಿಸ್ಥಿತಿ ನಿರ್ಮಾಣವಾಗಬಹುದು.

ಬಂಡೀಪುರ ಸೇರಿದಂತೆ ವಿವಿಧ ಅರಣ್ಯ ಪ್ರದೇಶಗಳಲ್ಲಿ ಕಾಡ್ಗಿಚ್ಚಿನಿಂದ ಸಾಕಷ್ಟು ತೊಂದರೆ ಉಂಟಾಗಿರುವ ಘಟನೆಗಳನ್ನು ನೋಡಿದ್ದೇವೆ. ಕಾಡ್ಗಿಚ್ಚಿನಿಂದ ಅರಣ್ಯ ಹಾಗೂ ಪ್ರಾಣಿಗಳಿಗೆ ಬಹಳಷ್ಟು ತೊಂದರೆಯಾಗಿದೆ. ಕೆಲವೊಮ್ಮೆ ಒಂದು ಸಣ್ಣ ಕಿಡಿಯಿಂದಲೇ ಇಡೀ ಅರಣ್ಯ ನಾಶವಾಗುವ ಪರಿಸ್ಥಿತಿ ಎದುರಾಗುತ್ತದೆ. ಕಾಡ್ಗಿಚ್ಚು ಸಂಭವಿಸಿದ ಸಂದರ್ಭದಲ್ಲಿ ಅರಣ್ಯವನ್ನು ಬೆಂಕಿಯಿಂದ ರಕ್ಷಿಸಲು ಅರಣ್ಯ ರಕ್ಷಕರು ಸಾಕಷ್ಟು ತೊಂದರೆಗಳನ್ನು ಎದುರಿಸುತ್ತಾರೆ. ಬೆಂಕಿ ನಂದಿಸುವ ಕಾರ್ಯದಲ್ಲಿ ಕೆಲವರು ತಮ್ಮ ಜೀವವನ್ನೂ ಕಳೆದುಕೊಂಡಿರುವ ಘಟನೆಗಳಿವೆ. ಹೀಗಾಗಿ ನಾವು ಏನು ಮಾಡುತ್ತಿದ್ದೇವೆ ಹಾಗೂ ಅರಣ್ಯ ಸಂರಕ್ಷಣೆಯಲ್ಲಿ ನಮ್ಮ ಜವಾಬ್ದಾರಿ ಏನು ಎಂಬುದನ್ನು ತಿಳಿದುಕೊಳ್ಳಬೇಕು. ಅರಣ್ಯ ಸಂರಕ್ಷಣೆಗಾಗಿ ಶ್ರಮಿಸುವವರನ್ನು ನೆನಪಿಸಿಕೊಳ್ಳುವುದು ಹಾಗೂ ಈ ಕುರಿತು ಜಾಗೃತಿ ಮೂಡಿಸುವುದು ಒಳ್ಳೆಯ ಕಾರ್ಯವಾಗಿದೆ ಎಂದು ಅವರು ಹೇಳಿದರು.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ವಸಂತರೆಡ್ಡಿ



ಕೆ.ವಿ, ಅವರು ಮಾತನಾಡಿ, ಕರ್ನಾಟಕದಲ್ಲಿ ಕಳೆದ ಸುಮಾರು 60 ವರ್ಷಗಳಲ್ಲಿ ಪರಿಸರ ಮತ್ತು ಪ್ರಕೃತಿ ಸಂರಕ್ಷಣೆಗಾಗಿ ಅರಣ್ಯ ಇಲಾಖೆಯ ಸುಮಾರು 65 ಸಿಬ್ಬಂದಿ ಹಾಗೂ ಅಧಿಕಾರಿಗಳು ಪ್ರಾಣ ತ್ಯಾಗ ಮಾಡಿದ್ದಾರೆ. ಕಳೆದ ಐದು ವರ್ಷಗಳಲ್ಲೇ ಸುಮಾರು 17 ಮಂದಿ ಮೃತಪಟ್ಟಿದ್ದಾರೆ. ವೀರಪ್ಪನ್ ವಿರುದ್ಧದ ಕಾರ್ಯಾಚರಣೆಯಲ್ಲಿ ಪಿ. ಶ್ರೀನಿವಾಸ್ ಸೇರಿದಂತೆ ಹಲವರು ಪ್ರಾಣ ಕಳೆದುಕೊಂಡಿದ್ದಾರೆ. ಆನೆ, ಹುಲಿ ಹಾಗೂ ಚಿರತೆಗಳ ದಾಳಿ, ಕಾಡ್ಗಿಚ್ಚು ನಂದಿಸುವ ಕಾರ್ಯ ಮತ್ತು ಮಾನವ ವನ್ಯಜೀವಿ ಸಂಘರ್ಷದ ಸಂದರ್ಭದಲ್ಲಿಯೂ ಅನೇಕ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಾ ಪ್ರಾಣ ತ್ಯಾಗ ಮಾಡಿದ್ದಾರೆ. ಧಾರವಾಡದ ಎ. ಪೂಜಾರಿ (1996) ಹಾಗೂ ಗದಗ ಜಿಲ್ಲೆಯ ಎಂ.ಬಿ. ಶಿರಹಟ್ಟಿ (2005) ಅವರು ಕೂಡ ಪರಿಸರ ಸಂರಕ್ಷಣೆಗಾಗಿ ಪ್ರಾಣ ಕಳೆದುಕೊಂಡವರಲ್ಲಿ ಸೇರಿದ್ದಾರೆ ಎಂದರು.

1730 ರಲ್ಲಿ ಜೋಧ್‌ಪುರದ ಖೇಜರ್ಲಿ ಪ್ರದೇಶದಲ್ಲಿ ಮರಗಳ ರಕ್ಷಣೆಗಾಗಿ ಅಮೃತಾ ದೇವಿ ಸೇರಿದಂತೆ ಸಮುದಾಯದ 363 ಮಂದಿ ಪ್ರಾಣ ತ್ಯಾಗ ಮಾಡಿದ ಘಟನೆಯ ಸ್ಮರಣಾರ್ಥ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ಆಚರಿಸಲಾಗುತ್ತಿದೆ. ಅರಣ್ಯ ಮತ್ತು ಪ್ರಕೃತಿ ಸಂರಕ್ಷಣೆಗೆ ತಮ್ಮ ಪ್ರಾಣವನ್ನೇ ಅರ್ಪಿಸಿದ ಎಲ್ಲ ಹುತಾತ್ಮರ ತ್ಯಾಗವನ್ನು ಸ್ಮರಿಸಲಾಯಿತು ಎಂದು ಅವರು ಹೇಳಿದರು.

ಅರಣ್ಯ ಸಂರಕ್ಷಣೆಗೆ ಅರಣ್ಯ ಇಲಾಖೆಯೊಂದಿಗೆ ಅಭಿವೃದ್ಧಿ ಇಲಾಖೆಗಳು ಹಾಗೂ ಅಧಿಕಾರಿಗಳ ಸಹಕಾರ ಅತ್ಯವಶ್ಯಕ. ಕಾಡಿನಲ್ಲಿ ಅಡಗಿರುವ ವೈರಸ್‌ಗಳು ಭವಿಷ್ಯದಲ್ಲಿ ಮನುಕುಲಕ್ಕೆ ಅಪಾಯ ತಂದೊಡ್ಡಬಹುದು. ಅರಣ್ಯ ಹುತಾತ್ಮರ ಧೈರ್ಯ, ಕರ್ತವ್ಯನಿಷ್ಠೆ ಹಾಗೂ ಆದರ್ಶಗಳನ್ನು ನಮ್ಮ ಕರ್ತವ್ಯದಲ್ಲಿ ಅಳವಡಿಸಿಕೊಂಡು ಪ್ರಕೃತಿ ಸಂರಕ್ಷಿಸುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವಿಸುವದು. ಹುತಾತ್ಮರ ತ್ಯಾಗದಿಂದ ಪ್ರೇರಣೆ ಪಡೆದು ಒಗ್ಗಟ್ಟು, ಸುರಕ್ಷತೆ ಹಾಗೂ ಮುನ್ನೆಚ್ಚರಿಕೆಗೆ ಆದ್ಯತೆ ನೀಡಬೇಕು ಎಂದು ಹೇಳಿದರು.

ಹುಬ್ಬಳ್ಳಿ- ಧಾರವಾಡ ಪೊಲೀಸ್ ಆಯುಕ್ತ ಭೂಷಣ್ ಬೋರಸೆ ಅವರು ಮಾತನಾಡಿ, ಅರಣ್ಯ ಇಲಾಖೆಯ ಕರ್ತವ್ಯಕ್ಕಾಗಿ ಹುತಾತ್ಮರು ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ್ದಾರೆ. ಇದು ಅವರ ಸೇವೆ ಮತ್ತು ತ್ಯಾಗಕ್ಕೆ ಗೌರವ ಸಲ್ಲಿಸುವ ಸಂದರ್ಭವಾಗಿದೆ. ಪ್ರಕೃತಿಯನ್ನು ಕಾಪಾಡುವುದು ಕೇವಲ ಅರಣ್ಯ ಇಲಾಖೆಯ ಜವಾಬ್ದಾರಿಯಲ್ಲ. ಪ್ರತಿಯೊಬ್ಬ ಸರ್ಕಾರಿ ಅಧಿಕಾರಿ ಹಾಗೂ ಪ್ರತಿಯೊಬ್ಬ ನಾಗರಿಕನೂ ಪ್ರಕೃತಿ ಸಂರಕ್ಷಣೆಯ ಜವಾಬ್ದಾರಿಯನ್ನು ಹೊಂದಿದ್ದಾರೆ. ಮನುಷ್ಯರು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸಾಕಷ್ಟು ಮುಂದುವರಿದಿದ್ದೇವೆ, ನಾವೇ ಶ್ರೇಷ್ಠ ಜೀವಿಗಳು ಎಂಬ ಅಹಂಕಾರ ಹೊಂದಿರುತ್ತೇವೆ. ಆದರೆ ಕೋವಿಡ್‌ನಂತಹ ಸಣ್ಣ ವೈರಸ್ ಕೂಡ ಮೂರು-ನಾಲ್ಕು ವರ್ಷಗಳ ಕಾಲ ಇಡೀ ಜಗತ್ತಿಗೆ ಸಂಕಷ್ಟ ತಂದಿತು. ಇದರಿಂದ ಪ್ರಕೃತಿ ಎಷ್ಟು ಶಕ್ತಿಶಾಲಿಯಾಗಿದೆ ಎಂಬುದು ನಮಗೆ ತಿಳಿಯುತ್ತದೆ ಎಂದು ಅವರು ಹೇಳಿದರು.

ನದಿಗಳಿಗೆ ಅಣೆಕಟ್ಟು ನಿರ್ಮಿಸಿ ನೀರನ್ನು ನಿಯಂತ್ರಿಸಬಹುದು ಎಂಬ ದರ್ಪ ಮನುಷ್ಯರಲ್ಲಿದೆ. ಆದರೆ ಪ್ರಕೃತಿ ವಿಕೋಪಗಳು ಸಂಭವಿಸಿದಾಗ ಮನುಷ್ಯ ಪ್ರಕೃತಿಯ ಮುಂದೆ ಎಷ್ಟು ಸಣ್ಣವನು ಎಂಬುದು ಅರಿವಾಗುತ್ತದೆ. ಆದ್ದರಿಂದ ಪ್ರಕೃತಿಯ ಬಗ್ಗೆ ಅಹಂಕಾರ ಇರಬಾರದು. ನಮಗೆ ಸ್ವಚ್ಛ ಹಾಗೂ ಉತ್ತಮ ಪರಿಸರ ದೊರೆತಿದೆ. ಅದೇ ರೀತಿಯ ಸ್ವಚ್ಛ ಪರಿಸರವನ್ನು ಮುಂದಿನ ಪೀಳಿಗೆಗೂ ನೀಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಅರಣ್ಯ ಹುತಾತ್ಮರಿಗೆ ಪುಷ್ಪ ನಮನ ಸಲ್ಲಿಸಿದರು. ಪೊಲೀಸ್ ಇಲಾಖೆಯಿಂದ ಗೌರವಂದನೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಉಪ ವಿಭಾಗ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುನಿತಾ ನಿಂಬರಗಿ ಹಾಗೂ ಸಂಜಯ್ ಗುಪ್ತಾ ಅವರು ಮಾತನಾಡಿದರು. ವಿವೇಕ ಟಿ.ಕವರಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಯುನಿವರ್ಸಿಟಿ ಪಬ್ಲಿಕ್ ಶಾಲೆಯ ಶಿಕ್ಷಕಿ ಡಾ.ಇಂದು ರವಿಕುಮಾರ ನಿರೂಪಿಸಿದರು. ಗಸ್ತು ಅರಣ್ಯ ಪಾಲಕ ಪ್ರಕಾಶ ಕಂಕಣವಾಡಿ ವಂದಿಸಿದರು.

ವೇದಿಕೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಅಲ್ಲಪ್ಪ ಎಂ.ಬಡಿಗೇರ, ಉತ್ತರ ಕರ್ನಾಟಕ ನಿವೃತ್ತ ಅರಣ್ಯ ಅಧಿಕಾರಿಗಳ ಸಂಘದ ಅಧ್ಯಕ್ಷ ವಿ.ಎಮ್. ಹಲಗತ್ತಿ, ಕೆ.ಎಫ್.ಡಿ.ಸಿಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಸುರೇಶ ತೇಲಿ, ಕಾರ್ಯ ಯೋಜನೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಪರಿಮಳ ವಿ.ಹೆಚ್, ಕೆ.ಎಸ್.ಎಪ್.ಆಯ್.ಸಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಮಹೇಶ ಹಿರೇಮಠ, ವಲಯ ಅರಣ್ಯ ಅಧಿಕಾರಿ ಕಿರಣಕುಮಾರ ಕರತಂಗಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸುಮನಾ ಜಯಂತ, ಸವಿತಾ ಎಂ. ದೊಣ್ಣಿ, ಶಿವಪ್ರಸಾದ ಕುಬಸದ, ವೀರೇಶ ಪಟ್ಟಣಶೆಟ್ಟಿ, ಶೈಲಾ ಕಿತ್ತೂರ, ಪಿ.ಡಿ. ಲಮಾಣಿ, ಮಂಜುನಾಥ ಭಾಗನ್ನವರ, ಉಮಾ ಪಾಟೀಲ, ಭಾರತಿ ಸಾಲಿಯಾನ ಸೇರಿದಂತೆ ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಪ್ರಜಾಪ್ರಭುತ್ವ, ಸಂವಿಧಾನ ರಕ್ಷಣೆಗೆ ಜನಾಂದೋಲನ ಅಗತ್ಯ : ಅರ್ಜುನ ಭದ್ರೆ

ಕಲಬುರಗಿ,ಸೆ.12-

ದೇಶದ ಪ್ರಜಾಪ್ರಭುತ್ವ, ಸಂವಿಧಾನ, ಸಾಮಾಜಿಕ ಸೌಹಾರ್ದತೆ ಹಾಗೂ ಜನರ ಸ್ವಾಭಿಮಾನವನ್ನು ರಕ್ಷಿಸಲು ದೇಶಾದ್ಯಂತ ದೊಡ್ಡ ಮಟ್ಟದ ಜನಾಂದೋಲನ ಅಗತ್ಯವಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಕ್ರಾಂತಿಕಾರಿ) ರಾಜ್ಯ ಸಂಚಾಲಕ ಅರ್ಜುನ ಭದ್ರೆ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರವನ್ನು ಟೀಕಿಸುವವರು ಹಾಗೂ ಸರ್ಕಾರದ ನೀತಿ-ನಿರ್ಧಾರಗಳನ್ನು ಪ್ರಶ್ನಿಸುವವರನ್ನು ದೇಶದ್ರೋಹಿಗಳು, ವಿದೇಶಿ ಏಜೆಂಟರು ಅಥವಾ ನಗರ ನಕ್ಸಲರು ಎಂದು ಬಿಂಬಿಸುವ ಪ್ರವೃತ್ತಿ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ ಎಂದು ಆರೋಪಿಸಿದರು.

ಸರ್ಕಾರದ ನೀತಿಗಳನ್ನು ಪ್ರಶ್ನಿಸುವುದು ಪ್ರಜಾಪ್ರಭುತ್ವದ ಸಹಜ



ಪ್ರಕ್ರಿಯೆಯಾಗಿದ್ದು, ಭಿನ್ನಾಭಿಪ್ರಾಯವನ್ನು ದಮನಿಸುವ ಬದಲು ಅದಕ್ಕೆ ಉತ್ತರ ನೀಡಬೇಕು. ದೇಶ ಎದುರಿಸುತ್ತಿರುವ ರೈತರ ಸಮಸ್ಯೆ, ನಿರುದ್ಯೋಗ, ಆರ್ಥಿಕ ಅಸಮಾನತೆ, ಮಣಿಪುರದ ಹಿಂಸಾಚಾರ, ಪತ್ರಕರ್ತರ ಮೇಲಿನ ದೌರ್ಜನ್ಯ, ವಿದ್ಯಾರ್ಥಿ-ಯುವಜನರ ಸಮಸ್ಯೆಗಳು ಸೇರಿದಂತೆ ಹಲವು ಗಂಭೀರ ವಿಚಾರಗಳ ಕುರಿತು ಪ್ರಧಾನಿ ಹಾಗೂ ಕೇಂದ್ರ ಸರ್ಕಾರ ಸಮರ್ಪಕವಾಗಿ ಸ್ಪಂದಿಸುತ್ತಿಲ್ಲ ಎಂದು ಅವರು ಟೀಕಿಸಿದರು.

ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಭಾರತದ ಸಂವಿಧಾನದ ಕುರಿತು ಅವಹೇಳನಕಾರಿ ಹೇಳಿಕೆಗಳು ಬಂದಾಗಲೂ ಕೇಂದ್ರ ಸರ್ಕಾರ ಮೌನ ವಹಿಸುತ್ತದೆ ಎಂದು ಅವರು ಆರೋಪಿಸಿದರು.

1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಿರಲಿಲ್ಲ, 2014ರ ನಂತರವೇ ದೇಶಕ್ಕೆ ನಿಜವಾದ ಸ್ವಾತಂತ್ರ್ಯ ದೊರೆಯಿತು ಎಂಬ ರೀತಿಯ ಹೇಳಿಕೆಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಸ್ಪಷ್ಟವಾಗಿ ಪ್ರತಿಕ್ರಿಯಿಸಬೇಕು ಎಂದು ಆಗ್ರಹಿಸಿದ ಭದ್ರೆ, ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಅವಹೇಳನ ಮಾಡುವ ಹೇಳಿಕೆಗಳನ್ನು ಯಾವುದೇ ಕಾರಣಕ್ಕೂ ಸಮರ್ಥಿಸಬಾರದು ಎಂದು ಹೇಳಿದರು.

ದೇಶದಲ್ಲಿ ಕೋಮು ಸಂಘರ್ಷ, ಭ್ರಷ್ಟಾಚಾರ, ಬೆಲೆ ಏರಿಕೆ, ಮಹಿಳೆಯರ ಮೇಲಿನ ದೌರ್ಜನ್ಯ, ಯುವಜನರ ನಿರುದ್ಯೋಗ, ರೈತರ ಆತ್ಮಹತ್ಯೆ, ಕಾರ್ಮಿಕರ ಹಕ್ಕುಗಳ ಕುಸಿತ ಹಾಗೂ ದಲಿತರ ಮೇಲಿನ ದೌರ್ಜನ್ಯ ಸೇರಿದಂತೆ ಹಲವು ಸಮಸ್ಯೆಗಳು ಮುಂದುವರಿದಿವೆ. ಈ ಸಮಸ್ಯೆಗಳ ವಿರುದ್ಧ ಜನಪರ ಸಂಘಟನೆಗಳು, ರೈತರು, ಯುವಜನರು, ಬುದ್ಧಿಜೀವಿಗಳು, ಪ್ರಜಾಸತ್ತಾತ್ಮಕ ಶಕ್ತಿಗಳು ಹಾಗೂ ಜನಪರ ರಾಜಕೀಯ ಪಕ್ಷಗಳು ಒಗ್ಗೂಡಿ ಹೋರಾಟ ನಡೆಸಬೇಕಿದೆ ಎಂದು ಅವರು ಕರೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಲ್ಲಿಕಾರ್ಜುನ ಕ್ರಾಂತಿ, ಮಹಾಂತೇಶ ಬಡದಾಳ, ಮಲ್ಲಿಕಾರ್ಜುನ ಖನ್ನಾ, ಸೂರ್ಯಕಾಂತ ಅಜಾದಪೂರ, ಹನುಮಂತಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಗಣೇಶೋತ್ಸವಕ್ಕೆ ಕಟ್ಟುನಿಟ್ಟಿನ ಭದ್ರತೆ: 48 ವಿಸರ್ಜನಾ ಸ್ಥಳಗಳು ಸೂಕ್ಷ್ಮ ಕೇಂದ್ರ: ಎಸ್ಪಿ ಕಟ್ಟುನಿಟ್ಟಿನ ಕ್ರಮ

ಗಣೇಶ ಮಂಡಳಿಯವರು ಪ್ರತಿಷ್ಠಾಪನೆಯ ದಿನದಿಂದ ವಿಸರ್ಜನೆಯ ದಿನದವರೆಗೆ ಪ್ರತಿದಿನ ಪಾಳಿಯಂತೆ ನಾಲ್ವರು ಸ್ವಯಂಸೇವಕರನ್ನು ನೇಮಿಸಿಕೊಳ್ಳಬೇಕು. ಗಣೇಶ ಮಂಟಪದ ಮುಂದೆ ಅಥವಾ ಮೆರವಣಿಗೆಯಲ್ಲಿ ಸಾರ್ವಜನಿಕರು ಅಮಲು ಪದಾರ್ಥ ಸೇವಿಸಿ ನೃತ್ಯ ಮಾಡುವುದನ್ನು ಮಂಡಳಿಯ ಪದಾಧಿಕಾರಿಗಳು ತಡೆಗಟ್ಟಿ ಕೂಡಲೇ ಪೊಲೀಸರ ಗಮನಕ್ಕೆ ತರಬೇಕು. ಮಂಟಪದಲ್ಲಿ ಆಕಸ್ಮಿಕ ಬೆಂಕಿ ಅವಘಡ ಸಂಭವಿಸಿದ ಸಂದರ್ಭದಲ್ಲಿ ಬಳಸಲು ನೀರು, ಮರಳು ಸೇರಿದಂತೆ ಅಗ್ನಿಶಾಮಕ ವ್ಯವಸ್ಥೆ ಹಾಗೂ ಪ್ರಥಮ ಚಿಕಿತ್ಸಾ ಕಿಟ್‌ಗಳನ್ನು ಕಡ್ಡಾಯವಾಗಿ ಇಟ್ಟುಕೊಳ್ಳಬೇಕು ಎಂದು ಸೂಚಿಸಿದರು.

ಗಣೇಶ ಮೂರ್ತಿಯ ಮೆರವಣಿಗೆಯನ್ನು ಪೊಲೀಸ್ ಇಲಾಖೆಯಿಂದ ಅನುಮತಿ ಪಡೆದ ಮಾರ್ಗದಲ್ಲಿಯೇ ನಡೆಸಬೇಕು. ಅನುಮತಿ ಇಲ್ಲದ ಮಾರ್ಗದಲ್ಲಿ ಮೆರವಣಿಗೆ ನಡೆಸುವಂತಿಲ್ಲ. ಮೆರವಣಿಗೆಯಲ್ಲಿ ಕರ್ಕಶವಾದ ವಾದ್ಯಗಳನ್ನು ಬಳಸುವುದು, ಬೆಂಕಿ ಆಟ ಪ್ರದರ್ಶಿಸುವುದು ಹಾಗೂ ಕತ್ತಿ, ಖಡ್ಗ, ತಲವಾರ, ಈಟಿ, ಭರ್ಚಿ ಸೇರಿದಂತೆ ಯಾವುದೇ ಅಪಾಯಕಾರಿ ಆಯುಧಗಳನ್ನು ಪ್ರದರ್ಶಿಸುವುದು ಅಥವಾ ಬಳಸುವುದು ಸಂಪೂರ್ಣವಾಗಿ ನಿಷೇಧಿಸಲಾಗಿದೆ, ಇಂತಹ ಬ್ಯಾನರ್ ಗಳನ್ನು ಪ್ರಿಂಟ್ ಹಾಕಬಾರದು ಎಂದು ಕಟ್ಟುನಿಟ್ಟಿನ ಆದೇಶವನ್ನು ಪ್ರಿಂಟರ್‌ಗಳಿಗೆ ಈಗಾಗಲೇ ಸಭೆ ಮಾಡಿ ತಿಳಿಸಲಾಗಿದೆ ಇದೇ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣದ ಮೇಲೆ ಹದ್ದಿನ ಕಣ್ಣು ಇಡಲಾಗಿದೆ ಎಂದು ತಿಳಿಸಿದರು.

ಗಣೇಶೋತ್ಸ ವವನ್ನು ಎಲ್ಲರೂ ಸೌಹಾರ್ದಯುತವಾಗಿ, ಶಾಂತಿಯುತವಾಗಿ ಹಾಗೂ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಆಚರಿಸುವಂತೆ ಜಿಲ್ಲಾ ಪೊಲೀಸ್ ಅಧೀಕ್ಷಕರು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ್ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್, ಸಚಿವ ಅಜಯ್ ಸಿಂಗ್ ಭೇಟಿ ಮಾಡಿದ ಕೆ. ಶಾಂತಪ್ಪ

ಬಸನಗೌಡ ತುರುವಿಹಾಳ, ಮಾಜಿ ಶಾಸಕ ಡಿ.ಎಸ್. ಹೂಲಗೇರಿ, ಕಾಂಗ್ರೆಸ್ ಮುಖಂಡರಾದ ಮಹಮ್ಮದ್ ಶಾಲಂ, ಜಿ. ಶಿವಮೂರ್ತಿ, ಅಮರೇಗೌಡ, ಹಂಚಿನಾಳ್, ಜಯವಂತರಾವ್ ಪತಂಗೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಗೌರಿ ಗಣೇಶ ಹಬ್ಬಕ್ಕೆ ಸಿಹಿ ಸುದ್ದಿ: ಸಾರ್ವಜನಿಕರ ಪ್ರಯಾಣಕ್ಕೆ 2,400 ಹೆಚ್ಚುವರಿ ಬಸ್‌ಗಳ ವ್ಯವಸ್ಥೆ

ಹಾಗೂ ಅಂತಾರಾಜ್ಯದ ವಿವಿಧ ಭಾಗಗಳಿಂದ ಜನರು ಬೆಂಗಳೂರಿಗೆ ಹಿಂತಿರುಗಲು ಸಹ ವಿಶೇಷ ಬಸ್‌ಗಳ ಸೌಲಭ್ಯ ಕಲ್ಪಿಸಲಾಗಿದೆ.

ಪ್ರಯಾಣಿಕರನ್ನ ಪ್ರೋತ್ಸಾ ಹಿಸಲು ಹಾಗೂ ಹಬ್ಬದ ಪ್ರಯಾಣವನ್ನ ಸುಲಭಗೊಳಿಸಲು ವಿಶೇಷ ರಿಯಾಯಿತಿಗಳನ್ನ ಕೆಎಸ್‌ಆರ್‌ಟಿಸಿ ಘೋಷಿಸಿದೆ. ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಟಿಕೆಟ್ ಕಾಯ್ದಿರಿಸಿದರೆ ಶೇಕಡಾ 5ರಷ್ಟು ರಿಯಾಯಿತಿ ಸಿಗಲಿದೆ.ಅದೇ ರೀತಿ ಹೋಗುವ ಮತ್ತು ಬರುವ ಎರಡೂ ಕಡೆಯ ಪ್ರಯಾಣದ ಟಿಕೆಟ್‌ಗಳನ್ನ ಒಟ್ಟಿಗೆ ಕಾಯ್ದಿರಿಸಿದಲ್ಲಿ, ಬರುವ ಪ್ರಯಾಣದ ದರದಲ್ಲಿ ಶೇ.10 ರಷ್ಟು ರಿಯಾಯಿತಿ ನೀಡಲಾಗುತ್ತಿದೆ.

ಪ್ರಯಾಣಿಕರು ನಿಲ್ದಾಣಗಳಿಗೆ ತೆರಳುವ ಮುನ್ನ ತಮ್ಮ ಟಿಕೆಟ್‌ನಲ್ಲಿ ನಮೂದಿಸಿರುವ ಬಸ್ ನಿಲ್ದಾಣ ಅಥವಾ ಪಿಕ್‌ಅಪ್ ಪಾಯಿಂಟ್‌ಗಳನ್ನ ಸರಿಯಾಗಿ ಪರಿಶೀಲಿಸಿಕೊಳ್ಳಲು ಸೂಚಿಸಲಾಗಿದೆ. ಕರ್ನಾಟಕ ಸೇರಿದಂತೆ ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಕೇರಳ, ಗೋವಾ, ಮಹಾರಾಷ್ಟ್ರ ಮತ್ತು ಪುದುಚೇರಿ ರಾಜ್ಯಗಳ ಪ್ರಮುಖ ನಗರಗಳಲ್ಲಿರುವ ನಿಗಮದ ಮುಂಗಡ ಆಸನ ಕಾಯ್ದಿರಿಸುವ ಕೌಂಟರ್‌ಗಳಲ್ಲೂ ಟಿಕೆಟ್ ಪಡೆಯಬಹುದು. ಹೆಚ್ಚುವರಿ ಸಾರಿಗೆಯ ವೇಳಾಪಟ್ಟಿ ಹಾಗೂ ಇ-ಟಿಕೆಟ್ ಬುಕ್ಕಿಂಗ್‌ಗಾಗಿ ನಿಗಮದ ಅಧಿಕೃತ ವೆಬ್‌ಸೈಟ್ ... ಅಥವಾ . ಗೆ ಭೇಟಿ ನೀಡಬಹುದು. ನಿಗಮದ ವ್ಯಾಪ್ತಿಯ ಎಲ್ಲಾ ತಾಲೂಕು ಮತ್ತು ಜಿಲ್ಲಾ ಬಸ್ ನಿಲ್ದಾಣಗಳಿಂದಲೂ ಪ್ರಯಾಣಿಕರ ಒತ್ತಡಕ್ಕೆ ಅನುಗುಣವಾಗಿ ಸ್ಥಳೀಯವಾಗಿ ವಿಶೇಷ ಸಾರಿಗೆಗಳ ಕಾರ್ಯಾಚರಣೆ ನಡೆಯಲಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಖಾಸಗಿ ಬಸ್‌ಗಳ ದರ ಏರಿಕೆ: ಮತ್ತೊಂದೆಡೆ ಖಾಸಗಿ ಬಸ್‌ಗಳ ಪ್ರಯಾಣದ ದರ ಏರಿಕೆಯಾಗಿದೆ.ಸಾಮಾನ್ಯ ದಿನಗಳಲ್ಲಿ 500ರಿಂದ 700ರೂ ಇದ್ದ ಕೆಲ ಮಾರ್ಗಗಳ ಪ್ರಯಾಣದ ದರ ಪ್ರಸ್ತುತ ಕೆಲ ಬಸ್‌ಗಳಲ್ಲಿ 2 ಸಾವಿರದ ಗಡಿ ದಾಟಿದೆ. ಡಿಸೇಲ್ ದರ, ನಿರ್ವಹಣೆ, ಬಿಡಿ ಭಾಗ ಸೇರಿದಂತೆ ತೆರಿಗೆ ಹೆಚ್ಚಳ ಹಿನ್ನೆಲೆಯಲ್ಲಿ ದರ ಏರಿಕೆ ಅನಿವಾರ್ಯ ಎಂದು ಖಾಸಗಿ ಬಸ್‌ಗಳ ಮಾಲೀಕರು ಸಮರ್ಥಿಸಿಕೊಳ್ಳುತ್ತಿದ್ದಾರೆ. ಆದರೂ ಸಹ ಬೇಕಾಬಿಟ್ಟಿಯಾಗಿ ದರ ಏರಿಕೆ ಮಾಡದಂತೆ ಖಾಸಗಿ ಬಸ್ ಸಂಸ್ಥೆಗಳಿಗೆ ಸಾರಿಗೆ ಇಲಾಖೆ ಎಚ್ಚರಿಕೆ ನೀಡಿದೆ.

ಸೆ.15ರಂದು ಹೆದ್ದಾರಿ ತಡೆ: ಅಮೀನ್‌ಪಾಷಾ ದಿದ್ದಿಗಿ

ರೈತರ ಉತ್ಪನ್ನ ಖರೀದಿಸಿದ ಬಳಿಕ ನಿಗದಿತ ಅವಧಿಯಲ್ಲಿ ಹಣ ಪಾವತಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಅಧಿಕಾರಿಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಬಾಕಿ ಇರುವ ₹130 ಕೋಟಿ ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕು. ಇಲ್ಲವಾದರೆ ಸಮಸ್ಯೆ ಬಗೆಹರಿಯುವವರೆಗೆ ಹೋರಾಟ ಮುಂದುವರಿಸಲಾಗುವುದು ಎಂದು ಎಚ್ಚರಿಸಿದರು.

ಇದೇ ವೇಳೆ ಹಳ್ಳದ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರಗೊಂಡಿದ್ದು, ನೀರಿನ ಮೂಲಗಳು ಬತ್ತಿವೆ. ಜಿಲ್ಲಾಡಳಿತ ಕೂಡಲೇ ತುರ್ತು ಕ್ರಮ ಕೈಗೊಂಡು ಟ್ಯಾಂಕರ್ ಮೂಲಕ ನೀರು ಪೂರೈಸುವುದರ ಜತೆಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ರಾಮನಗೌಡ, ರಾಜಶೇಖರಗೌಡ, ನಾಗನಗೌಡ, ಯಲ್ಲಪ್ಪ ಪೋತ್ನಾಳ ಸೇರಿದಂತೆ ರೈತ ಸಂಘದ ಪದಾಧಿಕಾರಿಗಳು ಹಾಗೂ ರೈತರು ಉಪಸ್ಥಿತರಿದ್ದರು.

ಕಾರು - ಟ್ರಕ್ ಮುಖಾಮುಖಿ ಡಿಕ್ಕಿ: ಐವರು ಯುವಕರ ದಾರುಣ ಸಾವು

(ಇಕೋ) ಮುಖಾಮುಖಿ ಡಿಕ್ಕಿಯಾದ ವಾಹನಗಳು. ಡಿಕ್ಕಿಯ ತೀವ್ರತೆ ಎಷ್ಟಿತ್ತೆಂದರೆ, ಇಕೋ ಕಾರಿನಲ್ಲಿದ್ದ ಐವರು ಯುವಕರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತರನ್ನು ಹರ್ ಗೋವಿಂದ ಹಜೋರಿ, ನಯನ್ ಸ್ವರ್ಗಿಯಾರಿ, ಪಪ್ಪು ಬೊರಾ, ಪ್ರಾಂಜಲ್ ಬನಿಯಾ ಮತ್ತು ಸಂಜಯ್ ಮೆಚ್ ಎಂದು ಗುರುತಿಸಲಾಗಿದೆ. ಇವರು ಸೋನಿತ್‌ಪುರ ಜಿಲ್ಲೆಯ ಘೋರಮಾರಿ-ಬಟಬಾರಿ ಪ್ರದೇಶದ ನಿವಾಸಿಗಳೆಂದು ತಿಳಿದುಬಂದಿದೆ. ಈ ಸುದ್ದಿ ತಿಳಿದ ಕುಟುಂಬಸ್ಥರು ದಿಕ್ಕುತೋಚದಂತಾಗಿದ್ದು, ಮಕ್ಕಳನ್ನು ಕಳೆದುಕೊಂಡು ಕಣ್ಣೀರಿಡುತ್ತಿದ್ದಾರೆ.

ಘಟನೆ ಬಳಿಕ ಟ್ರಕ್ ಚಾಲಕ ಸ್ಥಳದಿಂದ ಪರಾರಿಯಾಗಿದ್ದು, ಪೊಲೀಸರು ಸ್ಥಳಕ್ಕೆ ತೆರಳಿ ಮೃತದೇಹಗಳನ್ನು ವಶಕ್ಕೆ ಪಡೆದಿದ್ದಾರೆ. ಅಪಘಾತಕ್ಕೆ ನಿಖರ ಕಾರಣಗಳು ತಿಳಿದುಬಂದಿಲ್ಲ. ಪರಾರಿಯಾದ ಚಾಲಕನನ್ನು ಹುಡುಕಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಾಹನಗಳ ಮುಖಾಮುಖಿ ಡಿಕ್ಕಿಯಲ್ಲಿ ಐವರು ಮೃತಪಟ್ಟಿರುವ ಘಟನೆಯು ರಾಜ್ಯದ ಹೆದ್ದಾರಿಗಳಲ್ಲಿ ರಸ್ತೆ ಸುರಕ್ಷತಾ ನಿಯಮಗಳ ಜಾರಿ, ಸಂಚಾರ ಶಿಸ್ತು ಮತ್ತು ಜವಾಬ್ದಾರಿಯುತ ಚಾಲನೆಯ ಬಗ್ಗೆ ಪ್ರಶ್ನೆ ಹುಟ್ಟುಹಾಕಿದೆ.

ಕಳೆದ ತಿಂಗಳು ಗುವಾಹಟಿ ಸಮೀಪದ ಸೋನಾಪುರದಲ್ಲಿ ಸಂಭವಿಸಿದ್ದ ಭೀಕರ ಅಪಘಾತದಲ್ಲಿಯೂ ಐವರು ಮೃತಪಟ್ಟಿದ್ದರು.

ಪ್ರತ್ಯೇಕ ಘಟನೆ: ಮತ್ತೊಂದೆಡೆ ಬಿಹಾಲಿಯ ಕಾಶ್ಮರಿಯಲ್ಲಿ ಶುಕ್ರವಾರ ಮಧ್ಯರಾತ್ರಿ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರರಿಬ್ಬರು ಮೃತಪಟ್ಟ ಘಟನೆ ನಡೆದಿದೆ. ಯುವಕರು ಬೈಕ್‌ನಲ್ಲಿ ಹೋಗುತ್ತಿದ್ದಾಗ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದ್ದಾರೆ. ಪರಿಣಾಮ ರಾಂಚಲಿ ದಾಲ್ನಿಯ ರೂಪಮ್ ದಾಸ್ ಮತ್ತು ತೆಲಂಗಾಣದ ಗಜೇಂದ್ರ ಮಾಲಾ ಎಂಬ ಇಬ್ಬರು ಯುವಕರು ಸ್ಥಳದಲ್ಲಿಯೇ ಮೃತಪಟ್ಟಿರುವ ಮಾಹಿತಿ ಲಭ್ಯವಾಗಿದೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಹುತಾತ್ಮರಾದ ಅರಣ್ಯ ಇಲಾಖೆ ಅಧಿಕಾರಿ, ಸಿಬ್ಬಂದಿಗಳ ತ್ಯಾಗ ಮರೆಯಲಾಗದು : ನ್ಯಾ.ಮಂಜುನಾಥ ಜಿ.ಎ.

ಶಿವಮೊಗ್ಗ ,ಸೆ.12-

ಅರಣ್ಯ, ವನ್ಯಜೀವಿ ಮತ್ತು ನೈಸರ್ಗಿಕ ಸಂಪತ್ತನ್ನು ಸಂರಕ್ಷಿಸುವ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸುತ್ತಾ ಹುತಾತ್ಮರಾದ ಅರಣ್ಯ ಇಲಾಖೆಯ ಅಧಿಕಾರಿ, ಸಿಬ್ಬಂದಿ ಹಾಗೂ ಅರಣ್ಯ ರಕ್ಷಕರ ತ್ಯಾಗವನ್ನು ಮರೆಯಲಾಗದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷ ನ್ಯಾ.ಮಂಜುನಾಥ ಜಿ.ಎ. ಅವರು ಹೇಳಿದರು.

ಅವರು ಇಂದು ಅರಣ್ಯ ಇಲಾಖೆಯು ನಗರದ ಶ್ರೀಗಂಧದ ಕೋಠಿಯಲ್ಲಿರುವ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಆವರಣದಲ್ಲಿ ಏರ್ಪಡಿಸಲಾಗಿದ್ದ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಅರಣ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುವುದು ಸಾಮಾನ್ಯ ವಿಷಯವೇನಲ್ಲ. ಅನೇಕ ಸಂಘರ್ಷಗಳು ಕಾಣುತ್ತವೆ. ಅರಣ್ಯದಲ್ಲಿನ ಕೆಲಸ ಕಚೇರಿಯಲ್ಲಿನ ಕೆಲಸಕ್ಕಿಂತ ಭಿನ್ನವಾದುದು. ಕಾರ್ಯಕ್ಷೇತ್ರದಲ್ಲಿ ಎದುರಾಗುವ ಸಮಸ್ಯೆ-ಸವಾಲುಗಳನ್ನು ಎದುರಿಸಲು ಚಾಣಾಕ್ಷತೆ, ಕಠಿಣ ನಿರ್ಧಾರ, ಗಟ್ಟಿ ಗುಂಡಿಗೆ ಇರಬೇಕು ಎಂದ ಅವರು, ನಾಲ್ಕು ಗೋಡೆಗಳ ನಡುವಿನ ಸಮಸ್ಯೆಯನ್ನು ಎದುರಿಸಬಹುದು. ಆದರೆ, ಹೊರಗಿನ ಸಮಸ್ಯೆಗಳ ಇತ್ಯರ್ಥಕ್ಕೆ ಕೌಶಲ್ಯ, ವೃತ್ತಿಪರತೆ ಇರಬೇಕು. ಇವೆಲ್ಲವೂ ಅರಿತಿದ್ದು, ಸಾವು-ನೋವುಗಳು ನಡೆಯುವುದು ಮನುಷ್ಯನ ಬದುಕನ್ನು ಆತಂಕಕ್ಕೆ ತಳ್ಳುತ್ತದೆ. ನೆಮ್ಮದಿ ಕಳೆದು ಹೋಗುತ್ತದೆ ಎಂದವರು ನುಡಿದರು.



ಎಲ್ಲಾ ವಾಸ್ತವ ಸತ್ಯಗಳನ್ನು ಅರಿತ ನಾವು ಮೌಲಿಕವಾದ ವನ ಸಂಪತ್ತನ್ನು ಉಳಿಸಿ, ಬೆಳೆಸದೆ ಹೋದರೆ ಅದೊಂದು ಸಾಮಾಜಿಕ ದುರಂತವಲ್ಲದೇ ಮತ್ತೇನೂ ಅಲ್ಲ. ಅರಣ್ಯದ ನಾಶ ಎಂದರೆ ಅದು ಮನುಕುಲದ ವಿನಾಶವೇ ಸರಿ ಎಂದ ಅವರು, ಅರಣ್ಯ ರಕ್ಷಣೆಯಲ್ಲಿ ಕಾರ್ಯನಿರತ 65ಸಿಬ್ಬಂದಿಗಳು ಹುತಾತ್ಮರಾಗಿದ್ದು, ಅತ್ಯಂತ ನೋವಿನ ಸಂಗತಿ. ಅವರೆಲ್ಲರನ್ನು ಸ್ಮರಿಸಿಕೊಂಡು ಶ್ರದ್ಧಾಂಜಲಿ ಅರ್ಪಿಸುವುದು ಎಲ್ಲರ ಕರ್ತವ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಟಿ.ಹನುಮಂತಪ್ಪ ಅವರು ಮಾತನಾಡಿ, ಅರಣ್ಯ ಹುತಾತ್ಮರ ತ್ಯಾಗವು ಕೇವಲ ಇಲಾಖೆಯ ಕರ್ತವ್ಯನಿಷ್ಠೆಯ ಸಂಕೇತವಲ್ಲ; ಅದು ಪರಿಸರ ಸಂರಕ್ಷಣೆ, ಜೀವವೈವಿಧ್ಯ ರಕ್ಷಣೆ ಮತ್ತು ಭವಿಷ್ಯದ ಪೀಳಿಗೆಯ ಹಿತಕ್ಕಾಗಿ ಮಾಡಿದ ಸೇವೆಯ ಪ್ರತೀಕವಾಗಿದೆ ಎಂದರು.

ಅರಣ್ಯ ಸಂರಕ್ಷಣೆಯಲ್ಲಿ ಎದುರಾಗುವ ಅಪಾಯಗಳು, ಕಾಡುಗಳ ಮಹತ್ವ ಹಾಗೂ ವನ್ಯಜೀವಿಗಳ ರಕ್ಷಣೆಯ ಅಗತ್ಯದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕಾದುದು ಇಂದಿನ ತುರ್ತು ಅಗತ್ಯ. ಅರಣ್ಯ ಸಂಪತ್ತು ಮಾನವನಿಗೆ ಶುದ್ಧ ಗಾಳಿ, ನೀರು, ಮಳೆ, ಔಷಧೀಯ ಸಸ್ಯಗಳು ಹಾಗೂ ಜೀವವೈವಿಧ್ಯವನ್ನು ಒದಗಿಸುವ ಅರಣ್ಯವನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ ಎಂದರು.

ಅರಣ್ಯ ಹುತಾತ್ಮರನ್ನು ಸ್ಮರಿಸುವ ಈ ಸಂದರ್ಭದಲ್ಲಿ ಅವರ ಧೈರ್ಯ, ಪ್ರಾಮಾಣಿಕತೆ, ಕರ್ತವ್ಯನಿಷ್ಠೆ ಮತ್ತು ತ್ಯಾಗದ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪ ಮಾಡಬೇಕು. ಅರಣ್ಯ ಸಿಬ್ಬಂದಿಯ ಸೇವೆಗೆ ಗೌರವ ಸಲ್ಲಿಸುವುದರ ಜೊತೆಗೆ, ಅರಣ್ಯ ನಾಶ, ಅಕ್ರಮ ಬೇಟೆ ಮತ್ತು ಅವ್ಯಾಹತವಾಗಿ ಅಕ್ರಮವಾಗಿ ಮರಗಳ ಹನನ ಮಾಡುವುದರ ವಿರುದ್ಧ ಸಮಾಜ ಜಾಗೃತವಾಗಬೇಕು ಎಂದ ಅವರು, ಹುತಾತ್ಮರ ಕುಟುಂಬಕ್ಕೆ ಇಲಾಖೆ ನೆರವಾಗಿದೆ. ಸರ್ಕಾರವೂ ಕೂಡ ಕಾನೂನು ಬದ್ಧವಾಗಿ ನೆರವಿಗೆ ಬರಲಿದೆ. ಅಂತೆಯೇ ಜಿಲ್ಲಾಡಳಿತ ಮತ್ತು ಪೊಲೀಸ್‌ಇಲಾಖೆಯ ಸಹಕಾರ ನಿರಂತರವಾಗಿದ್ದು, ಅಧಿಕಾರಿ-ಸಿಬ್ಬಂಧಿಗಳಲ್ಲಿ ಆತ್ಮವಿಶ್ವಾಸ ಮತ್ತು ಬಲತುಂಬುವ ಮೂಲಕ ಪ್ರಕೃತಿ ನೈಜ ರಕ್ಷಣೆಗೆ ಸಹಕರಿಸುವಂತೆ ಅವರು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಸನ್ನಕೃಷ್ಣ ಪಟಗಾರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಹುತಾತ್ಮ ಹೆಸರನ್ನು ವಾಚಿಸಿ ಸ್ಮರಿಸಿದರು. ಮೂರು ವಿಶಾಲ ತೋಪುಗಳನ್ನು ಹಾರಿಸುವ ಮೂಲಕ ಹಾಗೂ ಪುಷ್ಪಗುಚ್ಛ ಅರ್ಪಿಸುವ ಮೂಲಕ ಹುತಾತ್ಮ ಅರಣ್ಯ ಸಿಬ್ಬಂಧಿಗಳಿಗೆ ಗೌರವ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಕಾರ್ಯ ಯೋಜನೆ ಮತ್ತು ಭೂ-ಮಾಪನ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಗಣಪತಿ ಕೆ., ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ, ಜಿಲ್ಲಾ ಪೊಲೀಸ್ವರಿಷ್ಠಾಧಿಕಾರಿ ಬಿ.ನಿಖಿಲ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎನ್.ಹೇಮಂತ್, ಸೇರಿದಂತೆ ಅರಣ್ಯ ಇಲಾಖೆಯ ವಿವಿಧ ವೃಂದದ ಅಧಿಕಾರಿ-ಸಿಬ್ಬಂಧಿಗಳು, ಹುತಾತ್ಮರ ಕುಟುಂಬದ ಸದಸ್ಯರು, ಗಣ್ಯರು ಉಪಸ್ಥಿತರಿದ್ದರು.

371(ಜೆ) ಸಮರ್ಪಕ ಜಾರಿಗೆ ಆಗ್ರಹಿಸಿ ಸೆ.15ರಿಂದ ಅನಿರ್ದಿಷ್ಟಾವಧಿ ಧರಣಿ



ಕಲಬುರಗಿ,ಸೆ.12-

ಕಲ್ಯಾಣ ಕರ್ನಾಟಕದ ಜನರಿಗೆ ಸಂವಿಧಾನಬದ್ಧವಾಗಿ ದೊರೆತಿರುವ 371(ಜೆ) ಕಲಂನ ಸಂಪೂರ್ಣ ಪ್ರಯೋಜನವನ್ನು ಒದಗಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ, ಕಲ್ಯಾಣ ಕರ್ನಾಟಕ 371(ಜೆ) ಕಲಂ ಕಾನೂನು ತಿದ್ದುಪಡಿ ಹೋರಾಟ ಸಮಿತಿಯು ಸೆಪ್ಟೆಂಬರ್ 15ರಿಂದ ಕೆಕೆಆರ್‌ಡಿಬಿ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸಲು ನಿರ್ಧರಿಸಿದೆ. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹೋರಾಟ ಸಮಿತಿ ಅಧ್ಯಕ್ಷ ಸೈಬಣ್ಣ ಜಮಾದಾರ, ಸರ್ಕಾರ ಕಲ್ಯಾಣ ಕರ್ನಾಟಕದ ಜನರಿಗೆ ಸಾಮಾಜಿಕ ನ್ಯಾಯ ಒದಗಿಸಲಾಗಿದೆ ಎಂದು ಹೇಳಿಕೊಳ್ಳುತ್ತಿದೆ. ಆದರೆ ವಾಸ್ತವದಲ್ಲಿ 371(ಜೆ) ಕಲಂನಡಿ ದೊರೆಯಬೇಕಾದ ಹಕ್ಕುಗಳು ಸಂಪೂರ್ಣವಾಗಿ ಜಾರಿಯಾಗಿಲ್ಲ ಎಂದು ಆರೋಪಿಸಿದರು.

371(ಜೆ) ಕಲಂ ಅನ್ನು ಕೇವಲ ಕೆಕೆಆರ್‌ಡಿಬಿ ಅನುದಾನಕ್ಕೆ ಸೀಮಿತಗೊಳಿಸಲಾಗುತ್ತಿದೆ. ಇದರಡಿ ಕಲ್ಯಾಣ ಕರ್ನಾಟಕದ ಜನರಿಗೆ ಉದ್ಯೋಗ, ಶಿಕ್ಷಣ, ನೇಮಕಾತಿ ಮತ್ತು ಸರ್ಕಾರಿ ನೌಕರರ ಮುಂಬಡ್ತಿಯಲ್ಲಿಯೂ ನ್ಯಾಯಯುತ ಅವಕಾಶಗಳು ದೊರೆಯಬೇಕು. ಆದರೆ ಈ ಕ್ಷೇತ್ರಗಳಲ್ಲಿ ಆಗುತ್ತಿರುವ ಅನ್ಯಾಯದ ಕುರಿತು ನಮ್ಮ ಭಾಗದ ಜನಪ್ರತಿನಿಧಿಗಳು ಸದನದಲ್ಲಿ ಧ್ವನಿ ಎತ್ತುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಳೆದ ಐದು ವರ್ಷಗಳಿಂದ 371(ಜೆ) ಕಲಂ ಸಮರ್ಪಕ ಜಾರಿ ಹಾಗೂ ಸರ್ಕಾರಿ ನೌಕರರ ಮುಂಬಡ್ತಿಯಲ್ಲಿ ಆಗುತ್ತಿರುವ ಅನ್ಯಾಯದ ಕುರಿತು ಸರ್ಕಾರ ಮತ್ತು ಜನಪ್ರತಿನಿಧಿಗಳಿಗೆ ಸಾಕ್ಷ್ಯಾಧಾರಗಳೊಂದಿಗೆ ಮಾಹಿತಿ ನೀಡಲಾಗಿದೆ. ಆದರೂ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಂಡಿಲ್ಲ ಎಂದು ಅವರು ದೂರಿದರು.

ಈ ಸಮಸ್ಯೆಗಳ ಪರಿಹಾರಕ್ಕಾಗಿ ಕಳೆದ ಹಲವು ವರ್ಷಗಳಲ್ಲಿ ಧರಣಿ ಸತ್ಯಾಗ್ರಹ, ಶವಯಾತ್ರೆ, ತಿಥಿ ಊಟ, ಪ್ರತಿಕೃತಿ ದಹನ, ಕೇಶಮುಂಡನೆ ಸೇರಿದಂತೆ ಹಲವು ರೀತಿಯ ಹೋರಾಟಗಳನ್ನು ನಡೆಸಲಾಗಿದೆ. ಆದರೂ ಸರ್ಕಾರ ಹಾಗೂ ಜನಪ್ರತಿನಿಧಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಸೈಬಣ್ಣ ಜಮಾದಾರ ಆರೋಪಿಸಿದರು.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಇಲಾಖೆ ಹಾಗೂ 371(ಜೆ) ಉಪಸಮಿತಿಯನ್ನು ಕಲಬುರಗಿಗೆ ಸ್ಥಳಾಂತರಿಸಬೇಕು, ಕಲ್ಯಾಣ ಕರ್ನಾಟಕದ ಸರ್ಕಾರಿ ನೌಕರರಿಗೆ ಮುಂಬಡ್ತಿಯಲ್ಲಿ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಿ, ಕಳೆದ ಐದು ವರ್ಷಗಳಿಂದ ಬಾಕಿ ಇರುವ ಮುಂಬಡ್ತಿಗಳನ್ನು ತಕ್ಷಣ ನೀಡಬೇಕು, ಕೆಕೆಆರ್‌ಡಿಬಿಯಲ್ಲಿನ ಭ್ರಷ್ಟಾಚಾರದ ಕುರಿತು ನಡೆದಿರುವ ತನಿಖಾ ವರದಿಯನ್ನು ಕೂಡಲೇ ಬಿಡುಗಡೆಗೊಳಿಸಿ, ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು, ಕಲಬುರಗಿಯಲ್ಲಿ ಪ್ರತ್ಯೇಕ ನ್ಯಾಯಪೀಠ ಸ್ಥಾಪಿಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಯಶವಂತರಾವ ಸೂರ್ಯವಂಶಿ, ವಿಜಯ ಜಾಧವ, ವಿಜಯಕುಮಾರ, ಎಂ.ಡಿ. ಅಮನ್, ಸಂಜು ಹೊಡಲಕರ್, ಸಂತೋಷ ಪೂಜಾರಿ, ಪ್ರಕಾಶ ಪಟ್ಟೆದಾರ ಹಾಗೂ ಬಕ್ಕಪ್ಪ ಬೆಮಳಖೇಡ ಉಪಸ್ಥಿತರಿದ್ದರು.



ಗಣೇಶ ಚತುರ್ಥಿ: ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಶಾಂತಿ ಸಭೆ

ಜೇವರ್ಗಿ,ಸೆ.12-

ಗಣೇಶ ಚತುರ್ಥಿ ಹಬ್ಬದ ಹಿನ್ನೆಲೆಯಲ್ಲಿ ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಶಾಂತಿ ಸಭೆ ಆಯೋಜಿಸಲಾಯಿತು. ಸಭೆಯಲ್ಲಿ ಜೇವರ್ಗಿ ಪಟ್ಟಣದ ವಿವಿಧ ಧರ್ಮಗಳ ಮುಖಂಡರು, ಸಂಘ-ಸಂಸ್ಥೆಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮತ್ತು ರಾಜಕೀಯ ಮುಖಂಡರು ಭಾಗವಹಿಸಿ, ಹಬ್ಬವನ್ನು ಶಾಂತಿಯುತವಾಗಿ ಆಚರಿಸುವ ಕುರಿತು ಚರ್ಚಿಸಿದರು.

ಗಣೇಶ ಚತುರ್ಥಿ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು, ಸಾರ್ವಜನಿಕರಿಗೆ ತೊಂದರೆಯಾಗದಂತೆ ಗಣೇಶ ಮೂರ್ತಿ ಪ್ರತಿಷ್ಠಾಪನೆ ಹಾಗೂ ವಿಸರ್ಜನಾ ಕಾರ್ಯಕ್ರಮಗಳನ್ನು ನಡೆಸುವುದು ಸೇರಿದಂತೆ ಹಲವು ವಿಷಯಗಳ ಕುರಿತು ಅಧಿಕಾರಿಗಳು ಮುಖಂಡರೊಂದಿಗೆ ಚರ್ಚಿಸಿದರು.

ಹಬ್ಬದ ಸಂದರ್ಭದಲ್ಲಿ ಎಲ್ಲ ಧರ್ಮಗಳ ಜನರು ಪರಸ್ಪರ ಸಹಕಾರ, ಸಹಬಾಳ್ವೆ ಹಾಗೂ ಸೌಹಾರ್ದತೆ ಕಾಪಾಡಿಕೊಂಡು ಆಚರಣೆಯಲ್ಲಿ ಭಾಗವಹಿಸಬೇಕು. ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಹಾಗೂ ಶಾಂತಿಗೆ ಯಾವುದೇ ರೀತಿಯ ಭಂಗ ಉಂಟಾಗದಂತೆ ಸಾರ್ವಜನಿಕರು ಪೊಲೀಸರೊಂದಿಗೆ ಸಹಕರಿಸಬೇಕು ಎಂದು ಅಧಿಕಾರಿಗಳು ಮನವಿ ಮಾಡಿದರು.

ಸಭೆಯಲ್ಲಿ ಕಲಬುರಗಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಹೇಶ್ ಮೇಘಣ್ಣನವರ, ಡಿವೈಎಸ್‌ಪಿ ಲೋಕೇಶ್ವರಪ್ಪ, ಸರ್ಕಲ್ ಇನ್‌ಸ್ಪೆಕ್ಟರ್ ಬಾಪುಗೌಡ, ಪಿಎಸ್‌ಐ ಮೆಹೆಬೂಬ್ ಅಲಿ, ಲಕ್ಷ್ಮಣ್ ಟಿಎಂಸಿ, ಅಬಕಾರಿ ಪಿಎಸ್‌ಐ, ಕೆಇಬಿ ಇಲಾಖೆಯ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಅಬ್ದುಲ್ ರಹಮಾನ್ ಪಟೇಲ್, ರವಿ ಕೊಳಕೂರ, ಅಬ್ದುಲ್ ಗನಿ ಮಿರ್ಚಿ, ವಕೀಲ ಮೊಹಿಯುದ್ದೀನ್ ಇನಾಮ್ದಾರ್ ಸೇರಿದಂತೆ ಜೇವರ್ಗಿಯ ವಿವಿಧ ಸಂಘ-ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ರಾಜಕೀಯ ಮುಖಂಡರು ಉಪಸ್ಥಿತರಿದ್ದರು.

ಭದ್ರಾವತಿ: ಜಂಟಿ ಕಾರ್ಯಾಚರಣೆ - 03 ಬಾಲಕಾರ್ಮಿಕರು ಹಾಗೂ 02 ಕಿಶೋರ ಕಾರ್ಮಿಕರ ರಕ್ಷಣೆ

ಶಿವಮೊಗ್ಗ, ಸೆ.11-

ಭದ್ರಾವತಿ ತಾಲೂಕಿನಲ್ಲಿ ಬಾಲಕಾರ್ಮಿಕರು ಮತ್ತು ಕಿಶೋರ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆಂಬ ಖಚಿತ ಮಾಹಿತಿಯ ಮೇರೆಗೆ ದಿನಾಂಕ 09-09-2026 ರಂದು ಜಂಟಿ ವಿಶೇಷ ತಪಾಸಣಾ ಕಾರ್ಯಾಚರಣೆ ನಡೆಸಿ, ಒಟ್ಟು 05 ಮಕ್ಕಳನ್ನು ರಕ್ಷಿಸಲಾಗಿದೆ.

ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ಸಹಾಯವಾಣಿ ಹಾಗೂ ಆಶ್ರಿತಾ ಸ್ವಯಂ ಸೇವಾ ಸಂಸ್ಥೆ (ಭದ್ರಾವತಿ) ಇವರುಗಳ ಜಂಟಿ ಭಾಗವಹಿಸುವಿಕೆಯೊಂದಿಗೆ ಈ ಕಾರ್ಯಾಚರಣೆ ನಡೆಯಿತು.

ಭದ್ರಾವತಿ ನಗರದ ವಿವಿಧ ವಾಣಿಜ್ಯ ಸಂಸ್ಥೆಗಳು, ಗ್ಯಾರೇಜುಗಳು ಹಾಗೂ ಗ್ರಾಮೀಣ ಪ್ರದೇಶದ ಅಲೆಮಾರಿ ತಾಣಗಳಲ್ಲಿ ಕೈಗೊಂಡ ವಿಶೇಷ ಪರಿಶೀಲನೆ ವೇಳೆ 03 ಬಾಲಕಾರ್ಮಿಕರು ಹಾಗೂ 02 ಕಿಶೋರ ಕಾರ್ಮಿಕರು ಕೆಲಸ ಮಾಡುತ್ತಿರುವುದು ಕಂಡುಬಂದಿದೆ. ರಕ್ಷಿಸಲ್ಪಟ್ಟ ಮಕ್ಕಳನ್ನು ತಕ್ಷಣವೇ ಕೆಲಸದ ಸ್ಥಳದಿಂದ ಬಿಡುಗಡೆಗೊಳಿಸಿ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಿ ದಾಖಲಿಸಲಾಗಿದೆ.



ಬಾಲಕಾರ್ಮಿಕ ನಿಷೇಧ: 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಯಾವುದೇ ಕೆಲಸಕ್ಕೆ ಹಾಗೂ 18 ವರ್ಷದೊಳಗಿನ ಕಿಶೋರರನ್ನು ಅಪಾಯಕಾರಿ ಉದ್ಯಮಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ.

ಶಿಕ್ಷೆ ಮತ್ತು ದಂಡ: ಬಾಲಕಾರ್ಮಿಕರನ್ನು ಕೆಲಸಕ್ಕೆ ಇಟ್ಟುಕೊಂಡ ಮಾಲೀಕರಿಗೆ 6 ತಿಂಗಳಿಂದ 2 ವರ್ಷಗಳವರೆಗೆ ಜೈಲು ಶಿಕ್ಷೆ ಅಥವಾ 20,000 ರೂ. ನಿಂದ 50,000 ರೂ. ಗಳವರೆಗೆ ದಂಡ (ಅಥವಾ ಎರಡನ್ನೂ) ವಿಧಿಸಬಹುದು. ಅಪರಾಧ ಪುನರಾವರ್ತನೆಯಾದರೆ 1 ರಿಂದ 3 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲಾಗುತ್ತದೆ.

ಪುನರ್ವಸತಿ ನಿಧಿ: ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ತಪ್ಪು ಎಸಗಿದ ಮಾಲೀಕರು ಪ್ರತಿಯೊಂದು ಮಗುವಿಗೆ 20,000 ರೂ. ಗಳನ್ನು ಮಕ್ಕಳ ಪುನರ್ವಸತಿ ಕಲ್ಯಾಣ ನಿಧಿಗೆ ಪಾವತಿಸಬೇಕಾಗುತ್ತದೆ.

ಶಿಕ್ಷಣದ ಹಕ್ಕು: ಉಚಿತ ಮತ್ತು ಕಡ್ಡಾಯ ಶಿಕ್ಷಣವು ಪ್ರತಿಯೊಂದು ಮಗುವಿನ ಹಕ್ಕಾಗಿದ್ದು, ಇದನ್ನು ಒದಗಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ.

ನಿಮ್ಮೂರು ಸುದ್ದಿ

ಸಂಪಾದಕೀಯ



ಭಿನ್ನಮತಗಳ ನಡುವೆ ಶೃಂಗಸಭೆ; ಒಮ್ಮತ ಸಾಧಿಸುವುದೇ ಸವಾಲು!

ಇರಾನ್-ಯುಎಇ ಉದ್ವಿಗ್ನತೆ, ರಷ್ಯಾ-ಪಶ್ಚಿಮ ರಾಷ್ಟ್ರಗಳ ಸಂಘರ್ಷ, ಏಷ್ಯಾ ದೈತ್ಯರ ಆಂತರಿಕ ತಿಕ್ಕಾಟಗಳು ಒಂದೆಡೆಯಾದರೆ, ಜಾಗತಿಕ ಆರ್ಥಿಕ ಸಮತೋಲನದ ಮಹತ್ವಾಕಾಂಕ್ಷೆ ಮತ್ತೊಂದೆಡೆ. ದೆಹಲಿಯಲ್ಲಿ ಇಂದು ಆರಂಭವಾಗಿರುವ ಶೃಂಗಸಭೆಯು ಈ ವೈರುಧ್ಯಗಳ ಕದನ ರಂಗವಾಗಿ ಬದಲಾಗಿದೆಯೋ ಅಥವಾ ರಾಜತಾಂತ್ರಿಕ ಒಮ್ಮತದ ಹೊಸ ವೇದಿಕೆಯಾಗುತ್ತದೆಯೋ ಎಂಬುದಕ್ಕೆ ಉತ್ತರ ಹುಡುಕುವ ಹಾದಿಯಲ್ಲಿದೆ.

ಬ್ರಿಕ್ಸ್ () ಎಂಬುದು ವಿಶ್ವದ ಪ್ರಮುಖ ಉದಯೋನ್ಮುಖ ಮಾರುಕಟ್ಟೆಗಳು ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಒಟ್ಟುಗೂಡಿಸಿರುವ ಒಂದು ಪ್ರಭಾವಿ ಅಂತಾರಾಷ್ಟ್ರೀಯ ಆರ್ಥಿಕ ಹಾಗೂ ರಾಜಕೀಯ ಒಕ್ಕೂಟ. ಪಾಶ್ಚಿಮಾತ್ಯ ದೇಶಗಳ ಏಕಪಕ್ಷೀಯ ಆರ್ಥಿಕ ಹಾಗೂ ರಾಜಕೀಯ ಪ್ರಾಬಲ್ಯಕ್ಕೆ ಪರ್ಯಾಯವಾಗಿ ನಿಲ್ಲುವುದು ಮತ್ತು ಜಾಗತಿಕ ದಕ್ಷಿಣದ ( ) ಧ್ವನಿಯನ್ನು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಗಟ್ಟಿಯಾಗಿ ಪ್ರತಿಧ್ವನಿಸುವುದು ಈ ಒಕ್ಕೂಟದ ಮುಖ್ಯ ಉದ್ದೇಶ. 2001ರಲ್ಲಿ ಆರ್ಥಿಕ ತಜ್ಞ ಜಿಮ್ ಒನೀಲ್ ಅವರು ಎಂಬ ಪದವನ್ನು ರೂಪಿಸಿದರು. 2006ರಲ್ಲಿ ಬ್ರೆಜಿಲ್, ರಷ್ಯಾ, ಭಾರತ ಮತ್ತು ಚೀನಾ ರಾಷ್ಟ್ರಗಳು ಈ ಪರಿಕಲ್ಪನೆಯ ಆಧಾರದ ಮೇಲೆ ಅನೌಪಚಾರಿಕವಾಗಿ ಒಗ್ಗೂಡಿದವು. ತದನಂತರ 2009ರಲ್ಲಿ ರಷ್ಯಾದ ಯೆಕಟೆರಿನ್ಬರ್ಗ್‌ನಲ್ಲಿ ಈ ರಾಷ್ಟ್ರಗಳ ಮೊದಲ ಅಧಿಕೃತ ವಾರ್ಷಿಕ ಶೃಂಗಸಭೆ ನಡೆಯಿತು ಮತ್ತು 2010ರಲ್ಲಿ ದಕ್ಷಿಣ ಆಫ್ರಿಕಾ ಸೇರ್ಪಡೆಗೊಂಡ ಬಳಿಕ ಇದು ಬ್ರಿಕ್ಸ್ () ಎಂದು ಮರುನಾಮಕರಣಗೊಂಡಿತು.

ಪ್ರಾರಂಭದಲ್ಲಿ ಕೇವಲ ನಾಲ್ಕು ದೇಶಗಳನ್ನು ಹೊಂದಿದ್ದ ಈ ಒಕ್ಕೂಟ ಕಾಲಕ್ರಮೇಣ ತನ್ನ ವ್ಯಾಪ್ತಿಯನ್ನು ಗಣನೀಯವಾಗಿ ವಿಸ್ತರಿಸಿಕೊಂಡಿದೆ. 2023ರಲ್ಲಿ ಈಜಿಪ್ಟ್, ಇಥಿಯೋಪಿಯಾ, ಇರಾನ್, ಸೌದಿ ಅರೇಬಿಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ದೇಶಗಳು ಸದಸ್ಯತ್ವ ಪಡೆದರೆ, 2025ರಲ್ಲಿ ಇಂಡೋನೇಷ್ಯಾ ಕೂಡ ಈ ಒಕ್ಕೂಟಕ್ಕೆ ಸೇರ್ಪಡೆಗೊಂಡಿತು. ಇದರೊಂದಿಗೆ ಪ್ರಸ್ತುತ ಒಟ್ಟು 11 ಸದಸ್ಯ ರಾಷ್ಟ್ರಗಳನ್ನು ಹೊಂದಿರುವ ಒಕ್ಕೂಟವು ವಿಶ್ವದ ಜನಸಂಖ್ಯೆಯ ಸುಮಾರು ಶೇ. 49 ರಷ್ಟು ಭಾಗವನ್ನು ಮತ್ತು ಜಾಗತಿಕ ಜಿಡಿಪಿಯ ಶೇ. 40 ರಷ್ಟನ್ನು ಪ್ರತಿನಿಧಿಸುವ ಮೂಲಕ ಅತ್ಯಂತ ಪ್ರಭಾವಿ ಜಾಗತಿಕ ವೇದಿಕೆಯಾಗಿ ಹೊರಹೊಮ್ಮಿದೆ.

ಅಲ್ಲಿಂದ ಇಲ್ಲಿವರೆಗಿನ ಈ ಒಕ್ಕೂಟದ ಪ್ರಯಾಣವು ಆರ್ಥಿಕ ಸ್ವಾಲಂಬನೆಯ ದಿಕ್ಕಿನಲ್ಲಿ ಪ್ರಮುಖ ಹೆಜ್ಜೆಗಳನ್ನಿಟ್ಟಿದೆ. ಅಭಿವೃದ್ಧಿಶೀಲ ರಾಷ್ಟ್ರಗಳ ಮೂಲಸೌಕರ್ಯ ಮತ್ತು ಸುಸ್ಥಿರ ಅಭಿವೃದ್ಧಿ ಯೋಜನೆಗಳಿಗೆ ಹಣಕಾಸು ನೆರವು ಒದಗಿಸಲು ರಾಷ್ಟ್ರಗಳು 2014ರಲ್ಲಿ ಶಾಂಘೈನಲ್ಲಿ ನ್ಯೂ ಡೆವಲಪ್ಮೆಂಟ್ ಬ್ಯಾಂಕ್ () ಅನ್ನು ಸ್ಥಾಪಿಸಿದವು. ಇದು ಇಂದು ಪಾಶ್ಚಿಮಾತ್ಯ ನೇತೃತ್ವದ ಹಣಕಾಸು ಸಂಸ್ಥೆಗಳಿಗೆ ಪರ್ಯಾಯ ಅಭಿವೃದ್ಧಿ ಹಣಕಾಸು ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ದೆಹಲಿಯಲ್ಲಿ ನಡೆಯುತ್ತಿರುವ ಶೃಂಗಸಭೆಯವರೆಗೆ ಬಂದು ತಲುಪಿರುವ , ಜಾಗತಿಕ ಬಿಕ್ಕಟ್ಟುಗಳು, ಪಶ್ಚಿಮದ ಆರ್ಥಿಕ ನಿರ್ಬಂಧಗಳು ಮತ್ತು ಅಮೆರಿಕದ ಡಾಲರ್ ಪ್ರಾಬಲ್ಯಕ್ಕೆ ಪರ್ಯಾಯ ಮಾರ್ಗಗಳನ್ನು ಹುಡುಕುವ ಅಂತಾರಾಷ್ಟ್ರೀಯ ರಾಜಕಾರಣದ ಕೇಂದ್ರ ಬಿಂದುವಾಗಿ ರೂಪುಗೊಂಡಿದೆ.

ಕಳೆದ ಎರಡು ದಶಕಗಳಲ್ಲಿ ಕೇವಲ ಆರ್ಥಿಕ ಚಿಂತನೆಯೊಂದರಿಂದ ಆರಂಭವಾಗಿ ವಿಶ್ವದ ಪ್ರಮುಖ ಶಕ್ತಿ ಕೇಂದ್ರವಾಗಿ ಬೆಳೆದಿರುವ ಒಕ್ಕೂಟ ಈಗ ತನ್ನ ಅಸ್ತಿತ್ವದ ಅತ್ಯಂತ ನಿರ್ಣಾಯಕ ಮತ್ತು ಮಹತ್ವದ ಘಟ್ಟದಲ್ಲಿದೆ. ಇದುವರೆಗೆ ಅಮೆರಿಕ ಮತ್ತು ಯುರೋಪ್ ನೇತೃತ್ವದ ಜಾಗತಿಕ ಆರ್ಥಿಕ ವ್ಯವಸ್ಥೆಗೆ ಒಂದು ಸೌಮ್ಯ ಪರ್ಯಾಯವಾಗಿ ಕಾಣಿಸಿಕೊಂಡಿದ್ದ ಈ ವೇದಿಕೆ, ಈಗ ಉಕ್ರೇನ್ ಯುದ್ಧ, ಮಧ್ಯಪ್ರಾಚ್ಯದ ಬಿಕ್ಕಟ್ಟುಗಳು ಮತ್ತು ಅಮೆರಿಕದ ಆಕ್ರಮಣಕಾರಿ ಸುಂಕ ನೀತಿಗಳ ಹಿನ್ನೆಲೆಯಲ್ಲಿ ಹೆಚ್ಚು ರಾಜಕೀಯ ಹಾಗೂ ಕಾರ್ಯತಂತ್ರದ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ. ಭವಿಷ್ಯದಲ್ಲಿ ಈ ಒಕ್ಕೂಟವು ತನ್ನ ಸದಸ್ಯ ರಾಷ್ಟ್ರಗಳ ನಡುವಿನ ಆಂತರಿಕ ಬಿಕ್ಕಟ್ಟುಗಳನ್ನು ಮೀರಿ ತನ್ನ ಮೂಲ ಉದ್ದೇಶದಂತೆ ಜಾಗತಿಕ ದಕ್ಷಿಣದ ನಿಜವಾದ ಧ್ವನಿಯಾಗಿ ಹೊರಹೊಮ್ಮಲು ಕೆಲವು ಕಠಿಣ ಹಾದಿಗಳನ್ನು ಕ್ರಮಿಸಬೇಕಿದೆ.

ಮುಂದಿನ ದಿನಗಳಲ್ಲಿ ಎದುರಿಸಲಿರುವ ಅತಿ ದೊಡ್ಡ ಸವಾಲು ಅಮೆರಿಕದ ಡಾಲರ್ ಪ್ರಾಬಲ್ಯಕ್ಕೆ ಪರ್ಯಾಯ ರೂಪಿಸುವುದು. ಸದಸ್ಯ ರಾಷ್ಟ್ರಗಳು ತಮ್ಮದೇ ಆದ ಸ್ಥಳೀಯ ಕರೆನ್ಸಿ ಗಳಲ್ಲಿ ವ್ಯಾಪಾರ ನಡೆಸಲು ಮತ್ತು ಪರ್ಯಾಯ ಪಾವತಿ ವ್ಯವಸ್ಥೆಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದರೂ, ಪ್ರತಿ ದೇಶದ ಆರ್ಥಿಕ ಸಾಮರ್ಥ್ಯ, ಹಣದುಬ್ಬರ ಮತ್ತು ಜಿಡಿಪಿಯಲ್ಲಿರುವ ಅಗಾಧ ವ್ಯತ್ಯಾಸದಿಂದಾಗಿ ಇದು ಅಷ್ಟು ಸುಲಭವಲ್ಲ. ಚೀನಾ ತನ್ನ ಕರೆನ್ಸಿ ಯಾದ ಯುವಾನ್ ಅನ್ನು ಮುಂಚೂಣಿಗೆ ತರಲು ಬಯಸಿದರೆ, ಭಾರತದಂತಹ ರಾಷ್ಟ್ರಗಳು ತಮ್ಮದೇ ಆದ ಆರ್ಥಿಕ ಸ್ವಾಯತ್ತತೆಯನ್ನು ಕಾಪಾಡಿಕೊಳ್ಳಲು ಯತ್ನಿಸುತ್ತವೆ. ಹೀಗಾಗಿ, ಆರ್ಥಿಕ ಸಮಾನತೆಯಿಲ್ಲದೆ ಒಮ್ಮತದ ಕರೆನ್ಸಿ ವ್ಯವಸ್ಥೆ ರೂಪಿಸುವುದು ಅಂದರೆ, ಪರ್ಯಾಯ ಪಾವತಿ ವ್ಯವಸ್ಥೆ ರೂಪಿಸುವುದು ದೀರ್ಘಕಾಲಿಕವಾಗಿ ಚರ್ಚೆಗೊಳಪಡುತ್ತದೆ.

ಹಾಗೆಯೇ, ಒಕ್ಕೂಟದ ವಿಸ್ತರಣೆಯು ಒಕ್ಕೂಟಕ್ಕೆ ಬಲ ತಂದಿದೆಯಾದರೂ, ಅದು ಹೊಸ ಆಂತರಿಕ ಸಂಘರ್ಷಗಳಿಗೂ ಮುನ್ನುಡಿ ಬರೆದಿದೆ. ಇರಾನ್, ಸೌದಿ ಅರೇಬಿಯಾ ಮತ್ತು ಯುಎಇ ದೇಶಗಳು ಒಂದೇ ವೇದಿಕೆಯಲ್ಲಿ ಬಂದಿರುವುದು ಆರ್ಥಿಕ ಸಹಕಾರಕ್ಕೆ ಅವಕಾಶ ಮಾಡಿಕೊಟ್ಟಿದ್ದರೂ, ಆ ಪ್ರದೇಶದಲ್ಲಿ ನಡೆಯುತ್ತಿರುವ ಪ್ರಾದೇಶಿಕ ಯುದ್ಧಗಳು ಮತ್ತು ಶೀತಲ ಸಮರಗಳು ನ ಒಗ್ಗಟ್ಟನ್ನು ಪರೀಕ್ಷೆಗೊಳಪಡಿಸುತ್ತಿವೆ. ಚೀನಾವು ಈ ವೇದಿಕೆಯನ್ನು ಸಂಪೂರ್ಣವಾಗಿ ತನ್ನ ಭೌಗೋಳಿಕ ರಾಜಕೀಯ ಹಿತಾಸಕ್ತಿಗಾಗಿ ಮತ್ತು ಅಮೆರಿಕದ ವಿರುದ್ಧದ ಬ್ಲಾಕ್ ಆಗಿ ಬಳಸಿಕೊಳ್ಳಲು ಬಯಸಿದರೆ, ಭಾರತ ಮತ್ತು ಬ್ರೆಜಿಲ್‌ನಂತಹ ದೇಶಗಳು ಇದನ್ನು ಯಾವುದೇ ನಿರ್ದಿಷ್ಟ ರಾಷ್ಟ್ರದ ಕಪಿಮುಷ್ಟಿಗೆ ಸಿಲುಕದ ಸ್ವತಂತ್ರ ವೇದಿಕೆಯಾಗಿ ಉಳಿಸಲು ಹೆಣಗುತ್ತಿವೆ. ಚೀನಾ-ಭಾರತ ಒಂದೇ ವೇದಿಕೆಯಲ್ಲಿ ಸಹಕರಿಸಬೇಕಾದರೂ, ಪರಸ್ಪರ ವಿಶ್ವಾಸದ ಕೊರತೆ ಅವುಗಳ ಸಹಕಾರಕ್ಕೆ ಮಿತಿ ವಿಧಿಸುತ್ತದೆ. ಭಾರತವು ಚೀನಾದ ಪ್ರಾಬಲ್ಯ ಹೆಚ್ಚಾಗದಂತೆ ನೋಡಿಕೊಳ್ಳಲು ಬಯಸುತ್ತದೆ.

ಉಕ್ರೇನ್ ಯುದ್ಧದ ವಿಚಾರದಲ್ಲಿ ಸದಸ್ಯ ರಾಷ್ಟ್ರಗಳ ನಿಲುವು ಒಂದೇ ಆಗಿಲ್ಲ. ರಷ್ಯಾ ತನ್ನ ಕ್ರಮಗಳಿಗೆ ಬೆಂಬಲ ಅಥವಾ ಕನಿಷ್ಠ ವಿರೋಧವಿಲ್ಲದ ನಿಲುವನ್ನು ಬಯಸುತ್ತದೆ. ಆದರೆ ಭಾರತ, ಬ್ರೆಜಿಲ್ ಮತ್ತು ಇತರ ರಾಷ್ಟ್ರಗಳು ಯುದ್ಧದ ಪರಿಣಾಮಗಳನ್ನು ಕಡಿಮೆ ಮಾಡುವುದರ ಜೊತೆಗೆ ಪಶ್ಚಿಮ ರಾಷ್ಟ್ರಗಳೊಂದಿಗೆ ತಮ್ಮ ಸಂಬಂಧಗಳನ್ನೂ ಕಾಪಾಡಿಕೊಳ್ಳಬೇಕಾಗಿದೆ. ಹೀಗಾಗಿ, ಯುದ್ಧದ ಕುರಿತು ಕಠಿಣ ಸಾಮಾನ್ಯ ನಿಲುವು ರೂಪಿಸುವುದು ಕಷ್ಟ.

ಈ ಎಲ್ಲದರ ನಡುವೆ ಭಾರತಕ್ಕೆ ದ್ವಂದ್ವ ಸವಾಲಿದೆ. ಒಂದೆಡೆ, ಮೂಲಕ ಜಾಗತಿಕ ದಕ್ಷಿಣದ ರಾಷ್ಟ್ರಗಳ ಸಹಕಾರವನ್ನು ಬಲಪಡಿಸಬೇಕು. ಮತ್ತೊಂದೆಡೆ, ಅಮೆರಿಕ ಮತ್ತು ಯುರೋಪ್‌ಗಳೊಂದಿಗೆ ತನ್ನ ವ್ಯಾಪಾರ, ತಂತ್ರಜ್ಞಾನ ಹಾಗೂ ಕಾರ್ಯತಂತ್ರದ ಸಂಬಂಧಗಳನ್ನು ಕಾಪಾಡಿಕೊಳ್ಳಬೇಕು. ಒಕ್ಕೂಟದ ಭವಿಷ್ಯ ಅದು ಪ್ರತಿ ವಿಚಾರದಲ್ಲೂ ಒಂದೇ ರೀತಿಯ ಒಮ್ಮತ ಸಾಧಿಸುವುದರ ಮೇಲೆ ಮಾತ್ರ ಅವಲಂಬಿತವಾಗಿಲ್ಲ, ಜತೆಗೆ ಭಿನ್ನಾಭಿಪ್ರಾಯಗಳ ನಡುವೆಯೂ ಪರಸ್ಪರ ಹಿತಾಸಕ್ತಿಯ ಆರ್ಥಿಕ ಮತ್ತು ತಾಂತ್ರಿಕ ಸಹಕಾರವನ್ನು ಹೇಗೆ ಮುಂದುವರಿಸುತ್ತದೆ ಎಂಬುದರ ಮೇಲೆ ನಿಂತಿದೆ. ಕೃತಕ ಬುದ್ಧಿಮತ್ತೆ (), ನವೀಕರಿಸಬಹುದಾದ ಇಂಧನ, ಹವಾಮಾನ ಬದಲಾವಣೆ ಮತ್ತು ಜಾಗತಿಕ ಪೂರೈಕೆ ಸರಪಳಿಯ ಸುರಕ್ಷತೆಯಂತಹ ವಿಷಯಗಳಲ್ಲಿ ಒಕ್ಕೂಟವು ಒಟ್ಟಾಗಿ ಕೆಲಸ ಮಾಡಿದರೆ ಮಾತ್ರ, ಜಾಗತಿಕವಾಗಿ ತನ್ನ ಪ್ರಭಾವವನ್ನು ಗಟ್ಟಿಗೊಳಿಸಲು ಸಾಧ್ಯ. ಈ ನಿಟ್ಟಿನಲ್ಲಿ ಬದಲಾಗುತ್ತಿರುವ ಬಹುಧ್ರುವೀಯ ಜಗತ್ತಿನಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಆರ್ಥಿಕ ಭದ್ರತೆ ಮತ್ತು ರಾಜತಾಂತ್ರಿಕ ಸ್ವಾತಂತ್ರ್ಯವನ್ನು ತಂದುಕೊಡುವ ಪ್ರಮುಖ ಶಕ್ತಿಯಾಗಿ ರೂಪುಗೊಳ್ಳಬೇಕಿದೆ. ಈ ಎಲ್ಲಾ ಸವಾಲುಗಳನ್ನು ದಾಟಿ ಈ ಬಾರಿಯ ಯಶಸ್ವಿಯಾಗಬೇಕಿದೆ.

ನಾಗರ ಪಂಚಮಿಯಿಂದ ಗೌರಿ ಗಣೇಶನವರೆಗೆ: ಹಬ್ಬಗಳ ಹಿಂದಿನ ಕೃಷಿ ವಿಜ್ಞಾನ, ಆರ್ಥಿಕ ಚಕ್ರ

ನಾಗರ ಪಂಚಮಿ ಶ್ರಾವಣ ಮಾಸದಲ್ಲಿ ಬರುತ್ತದೆ. ಆಗ ಮಳೆ ಸುರಿದು ಹುತ್ತಗಳು ತೇವವಾಗಿರುತ್ತವೆ. ರೈತ ತನ್ನ ಹೊಲದಲ್ಲಿ ಹುತ್ತವನ್ನು ಒಡೆಯುವುದಿಲ್ಲ. ಏಕೆಂದರೆ ಹುತ್ತದಲ್ಲಿರುವ ಗೆದ್ದಲು ಮತ್ತು ಇರುವೆಗಳೇ ಭೂಮಿಯ ಅತ್ಯುತ್ತಮ ಇಂಜಿನಿಯರ್ ಗಳು. ಅವು ಭೂಮಿಯಾಳದ ಗಟ್ಟಿ ಮಣ್ಣನ್ನು ಮೇಲೆ ತಂದು, ಮಣ್ಣನ್ನು ಸಡಿಲ ಮಾಡಿ, ನೀರು ಇಂಗುವಂತೆ ಮಾಡುತ್ತವೆ. ಅವುಗಳ ಬಿಲಗಳೇ ಮಳೆ ನೀರು ಭೂಮಿಯಲ್ಲಿ ಇಂಗುವ ನೈಸರ್ಗಿಕ ಕೊಳವೆಗಳು.

ಆ ಗೆದ್ದಲುಗಳಿಗೆ ಮಳೆಗಾಲದಲ್ಲಿ ಆಹಾರ ಸಿಗುವುದಿಲ್ಲ. ಆದ್ದರಿಂದ ರೈತ ಅಕ್ಕಿ ತಂಬಿಟ್ಟು (ಕಾರ್ಬೋಹೈಡ್ರೇಟ್) ಮತ್ತು ಎಳ್ಳು ತಂಬಿಟ್ಟು (ಎಣ್ಣೆ ಮತ್ತು ಪ್ರೋಟೀನ್) ಅನ್ನು ಹುತ್ತದ ಬಳಿ ಇಡುತ್ತಿದ್ದ. ಅದು ನಾಗರನಿಗೆ ಅಲ್ಲ, ಆ ಜೀವಿಗಳಿಗೆ. ಇನ್ನು ಒಣಗಿದ ಕೊಬ್ಬರಿ ಮಟ್ಟೆಯಲ್ಲಿ ಬೆಂಕಿ ಹಾಕಿ, ಅದಕ್ಕೆ ಬೆಣ್ಣೆ ಹಾಕಿ ಬರುವ ದಪ್ಪ ಹೊಗೆಯನ್ನು ಹುತ್ತಕ್ಕೆ ತೋರಿಸುತ್ತಿದ್ದರು. ಕೊಬ್ಬರಿ ಚಿಪ್ಪಿನ ಹೊಗೆ ಹುತ್ತದೊಳಗಿನ ಹಾನಿಕಾರಕ ಶಿಲೀಂಧ್ರವನ್ನು ಕೊಲ್ಲುತ್ತದೆ, ಬೆಣ್ಣೆಯ ಹೊಗೆ ನೈಸರ್ಗಿಕ ಕ್ರಿಮಿನಾಶಕವಾಗಿ ಕೆಲಸ ಮಾಡಿ ಅಲ್ಲಿನ ಸೊಳ್ಳೆ ಮತ್ತು ಕ್ರಿಮಿಗಳನ್ನು ಓಡಿಸುತ್ತದೆ. ಇದೇ ನಮ್ಮ ಹಿರಿಯರ ಪರಿಸರ ವಿಜ್ಞಾನ.

ಗೌರಿ -ಹಬ್ಬ ಮಣ್ಣಿನ ಫಲವತ್ತತೆಯ ಸಂಕೇತ

ಗೌರಿ ಹಬ್ಬವನ್ನು ಶ್ರಾವಣ/ಭಾದ್ರಪದ ಮಾಸದ ಹೊಸ ಮಣ್ಣಿನಲ್ಲಿ ಆಚರಿಸುತ್ತೇವೆ. ಇದು ಸುಗ್ಗಿಯ ಮಣ್ಣಡಿಯ ಸಂಭ್ರಮ. ರೈತರು ಮುಂದಿನ ಬಿತ್ತನೆಗೆ ಸಿದ್ಧವಾಗುತ್ತಿರುವಾಗ, ಗೌರಿ ಮತ್ತು ಪರಿಷದಿಯ ತಯಾರಾದ ಮಣ್ಣಿನ ಗೊಂಬೆಗಳು ಹೊಸ ಮಣ್ಣಿನ ಫಲವತ್ತತೆಯ ಸಂಕೇತವಾಗಿ ಮನೆಗೆ ಬರುತ್ತವೆ. ಈ ಹಬ್ಬದಲ್ಲಿ ಬಳಸುವ ವಿವಿಧ ಬಗೆಯ ಸೊಪ್ಪುಗಳು, ಗೆಡ್ಡೆಗಳು ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಪ್ರಕೃತಿಯೇ ನೀಡಿದ ಗೊಬ್ಬರದಂತಿವೆ.

ಗಣೇಶ ಇದು ಗಣಗಳ ರಾಜ್ಯೋತ್ಸವ, ಕೃಷಿ ಗಣರಾಜ್ಯೋತ್ಸವ



ನಮ್ಮ ನಾಡಿನ ಆರ್ಥಿಕ ವ್ಯವಸ್ಥೆಯನ್ನು ಬಲಪಡಿಸಿಕೊಳ್ಳುವುದೇ ಗೌರಿ ಗಣೇಶ ಹಬ್ಬದ ಹಿಂದಿನ ದೊಡ್ಡ ಉದ್ದೇಶ.

ಮುಂಗಾರು ಮಳೆಯಲ್ಲಿ ಭತ್ತ ಇರುವುದಿಲ್ಲ. ಇರುವುದು ತೊಗರಿ, ಹೆಸರು, ಉದ್ದು, ಹುರಳಿ, ಅಲಸಂದೆ, ಗೋಧಿಯಂತಹ ದ್ವಿದಳ ಧಾನ್ಯಗಳು. ರೈತ ಈ ಎಲ್ಲಾ ಬೆಳೆಗಳನ್ನು ಕೊಯ್ದು, ಒಕ್ಕಿ, ಒಟ್ಟುಗೂಡಿಸುತ್ತಾನೆ. ಈ ಒಟ್ಟುಗೂಡಿದ ರಾಶಿಯೇ ಗಣ. ಈ ಗಣಗಳ ಒಡೆಯನೇ ಗಣಪತಿ.

ಈ ಧಾನ್ಯಗಳನ್ನು ತುಂಬಿಡಲು ನಮ್ಮ ಕುಂಬಾರ ಮಾಡುವ ದೊಡ್ಡ ಮಣ್ಣಿನ ಪಾತ್ರೆಯೇ ಕೊಮ್ಮೆ. ಅದಕ್ಕೆ ಬಿಗಿಯಾದ ಮುಚ್ಚಳ ಮತ್ತು ಮೇಲೊಂದು ಹಿಡಿ ಇರುತ್ತದೆ. ಕೊಮ್ಮೆ ತುಂಬಾ ಹಳೆಯದಾದಾಗ ಅಥವಾ ಇಲಿ ಕೊರೆದಾಗ ಒಡೆದು ಹೋಗುತ್ತದೆ, ಕಾಳುಗಳು ಚೆಲ್ಲುತ್ತವೆ. ಕಾಳು ತಿನ್ನಲು ಇಲಿ ಬರುತ್ತದೆ, ಇಲಿಯನ್ನು ಹುಡುಕಿಕೊಂಡು ಹಾವು ಬರುತ್ತದೆ. ಒಡೆದ ಕೊಮ್ಮೆಯನ್ನು ರೈತ ಹಗ್ಗದಿಂದ ಬಿಗಿದು ಕಟ್ಟಿರುತ್ತಾನೆ.

ಇದನ್ನೇ ನೋಡಿದ ನಮ್ಮ ನಾಡಕವಿ ಒಂದು ಅದ್ಭುತ ಕಲ್ಪನೆ ಮಾಡಿದ್ದು ಹೀಗೆ: ಧಾನ್ಯ ತುಂಬಿದ ದಪ್ಪ ಕೊಮ್ಮೆಯೇ ಗಣಪತಿಯ ದೊಡ್ಡ ಹೊಟ್ಟೆ, ಮುಚ್ಚಳದ ಹಿಡಿಯೇ ಅವನ ಕಿರೀಟ, ಕಾಳು ತಿನ್ನಲು ಬಂದ ಇಲಿಯೇ ಅವನ ವಾಹನ, ಕೊಮ್ಮೆಗೆ ಬಿಗಿದು ಕಟ್ಟಿದ ಹಗ್ಗವೇ ಅವನ ಕೊರಳಿನ ಹಾವು. ರವಿ ಕಾಣದ್ದನ್ನು ಕವಿ ಕಂಡಿದ್ದು ಹೀಗೆ. ಇದು ದೇವರ ಕಥೆಯಲ್ಲ, ನಮ್ಮ ಕಣಜದ (ಕೊಮ್ಮೆ)ಕಥೆ.

ವಿಸರ್ಜನೆ ಎಂದರೆ ಬೀಜ ವಿಸರ್ಜನೆ, ಜಲಚರಗಳಿಗೆ ದಾನ

9 ದಿನಗಳ ಪೂಜೆ ನಂತರ ಕೊಮ್ಮೆಯಲ್ಲಿ (ಗಣಪತಿಯಲ್ಲಿ) ಕೂಡಿಟ್ಟ ಕಾಳುಗಳು ಮೊಳಕೆ ಬರಲು ಸಿದ್ಧವಾಗಿರುತ್ತವೆ. ಆ ಗಣಪತಿಯನ್ನು ಉತ್ಸವ ರೂಪದಲ್ಲಿ ಊರಿನ ಕೆರೆ-ಕಟ್ಟೆಗಳಿಗೆ ಒಯ್ದು, ನೀರಿನ ಜಲಚರಗಳಿಗೆ ಆಹಾರವಾಗಿ ಆ ಕಾಳುಗಳನ್ನು ಬಿಡುತ್ತಿದ್ದರು. ಇದು ಮೂರ್ತಿ ವಿಸರ್ಜನೆಯಲ್ಲ, ಇದು ಬೀಜ ವಿಸರ್ಜನೆ. ಹಾಗೆಯೇ ಹಬ್ಬಕ್ಕೆ ತವರಿಗೆ ಬಂದ ಹೆಣ್ಣು ಮಗಳನ್ನು (ಗೌರಿ) ಮತ್ತೆ ಗಂಡನ ಊರಿಗೆ ಕಳುಹಿಸಿ ಕೊಡುತ್ತಿದ್ದರು. ಎರಡೂ ಬಿತ್ತನೆಯ ಸಂಕೇತವೇ.

ಒಂದು ಹಬ್ಬದಿಂದ ನೂರಾರು ಜನರಿಗೆ ಕೆಲಸ ಸಿಗುತ್ತದೆ ಜೇಡಿ ಮಣ್ಣು ತರುವವನಿಗೆ, ಕುಂಬಾರನಿಗೆ, ಬಣ್ಣ ಬಳಿಯುವವನಿಗೆ, ಹೂವು-ಹಣ್ಣು ಮಾರುವವನಿಗೆ, ಭಜನೆ-ನಾಟಕ ಮಾಡುವ ಕಲಾವಿದನಿಗೆ, ಗಾಡಿ ಓಡಿಸುವವನಿಗೆ. ಒಂದು ಹಬ್ಬ ಎಂದರೆ ಒಂದು ಊರಿನ ಮನೋವಿಕಾಸ ಮತ್ತು ಆರ್ಥಿಕ ಚಕ್ರದ ತಿರುಗುವಿಕೆ. ಆದ್ದರಿಂದ ಗೌರಿ ಗಣೇಶ ಹಬ್ಬ ಎಂದರೆ ವಿಗ್ರಹಗಳ ಹಬ್ಬವಲ್ಲ, ಅದು ನಮ್ಮ ರೈತನ ಕೃಷಿ ಬೆಳೆಗಳ ಗಣರಾಜ್ಯೋತ್ಸವ.

ಗಣಪನ ಮೂರ್ತಿ ತಯಾರಕರ ಬದುಕು-ಬವಣೆ

ಗಣೇಶ ಚತುರ್ಥಿ ಎಂದರೆ ಭಕ್ತಿ, ಸಂಭ್ರಮ, ಮೆರವಣಿಗೆ, ಅಲಂಕಾರ ಮತ್ತು ಗಣಪತಿ ಮೂರ್ತಿಗಳ ವೈಭವ ಕಣ್ಣಮುಂದೆ ಬರುತ್ತದೆ. ಆದರೆ ಈ ಸಂಭ್ರಮದ ಹಿಂದೆ ಹಲವು ತಿಂಗಳುಗಳ ಕಾಲ ಬೆವರು ಸುರಿಸುವ ಕೈಗಳ ಕಥೆ ಅನೇಕರಿಗೆ ತಿಳಿದಿರುವುದಿಲ್ಲ. ಗಣೇಶೋತ್ಸವ ಆರಂಭವಾಗುವುದಕ್ಕೂ ಮುನ್ನವೇ ಮೂರ್ತಿ ತಯಾರಕರ ಬದುಕಿನಲ್ಲಿ ಹಬ್ಬದ ಕೆಲಸ ಶುರುವಾಗಿರುತ್ತದೆ.

ಕಲಬುರಗಿಯಲ್ಲಿ ಗಣೇಶ ಮೂರ್ತಿಗಳ ತಯಾರಿಕೆಯಲ್ಲಿ ತೊಡಗಿರುವ ರಾಜಸ್ಥಾನ ಮೂಲದ ಕುಟುಂಬಗಳು ಜನವರಿಯಿಂದಲೇ ಕೆಲಸ ಆರಂಭಿಸಿ, ಸುಮಾರು ಎಂಟು ತಿಂಗಳ ಕಾಲ ಹಗಲು-ರಾತ್ರಿ ಶ್ರಮಿಸಿ ಸಾವಿರಾರು ಮೂರ್ತಿಗಳಿಗೆ ರೂಪ ನೀಡುತ್ತಿವೆ. ಇವರು ಮಣ್ಣಿನ ಬದಲಿಗೆ ವಿವಿಧ ಸಾಮಗ್ರಿಗಳನ್ನು ಬಳಸಿ ಸಣ್ಣ ಮೂರ್ತಿಯಿಂದ ಹಿಡಿದು 12 ಅಡಿ ಎತ್ತರದ ಬೃಹತ್ ಮೂರ್ತಿಗಳವರೆಗೆ ಸಿದ್ಧಪಡಿಸುತ್ತಾರೆ.



ಜೊತೆ ಮಾತನಾಡಿದ ರಾಜಸ್ಥಾನ ಮೂಲದ ಮೂರ್ತಿ ತಯಾರಕ ವಕ್ತ ರಾಮ್ ಸೋಲಂಕಿ, ''ನಾವು ಸುಮಾರು 15 ವರ್ಷಗಳಿಂದ ಗಣಪತಿ ಮೂರ್ತಿಗಳನ್ನು ತಯಾರಿಸುತ್ತಿದ್ದೇವೆ. ಕಲಬುರಗಿಗೆ ಬಂದು 1520 ವರ್ಷಗಳಾಗಿವೆ. ನಾವು ಚಿಕ್ಕವರಿದ್ದಾಗಿನಿಂದಲೇ ಈ ವೃತ್ತಿಯಲ್ಲಿದ್ದೇವೆ'' ಎಂದು ತಮ್ಮ ವೃತ್ತಿ ಬದುಕಿನ ಕುರಿತು ವಿವರಿಸಿದರು.

''ಕಲಬುರಗಿಗೆ ಮೊದಲ ಬಾರಿಗೆ ಬಂದಾಗ ವರ್ಷಕ್ಕೆ 23 ಸಾವಿರ ಮೂರ್ತಿಗಳನ್ನು ತಯಾರಿಸುತ್ತಿದ್ದೆವು. ಈಗ 3040 ಸಾವಿರ ಮೂರ್ತಿಗಳನ್ನು ತಯಾರಿಸುತ್ತಿದ್ದೇವೆ. ಎಲ್ಲ ಮೂರ್ತಿಗಳಿಗೂ ಬೇಡಿಕೆ ಇದೆ. ಕಲಬುರಗಿ ಸುತ್ತಮುತ್ತಲಿನ ಗ್ರಾಮಗಳಲ್ಲದೆ ಹೈದರಾಬಾದ್, ಬೆಂಗಳೂರು ಮತ್ತು ಮುಂಬೈಯಂತಹ ನಗರಗಳಿಗೂ ಮೂರ್ತಿಗಳನ್ನು ಕಳುಹಿಸುತ್ತೇವೆ'' ಎಂದು ಹೇಳಿದರು.

ಮೂರ್ತಿ ತಯಾರಿಕೆಗೆ ಪಿಯುಪಿ, ನಾರಿಯಲ್ ಗುಂಜ್, ನೀರು, ವೈಟ್ ಸಿಮೆಂಟ್ ಸೇರಿದಂತೆ ವಿವಿಧ ಸಾಮಗ್ರಿಗಳನ್ನು ಬಳಸಲಾಗುತ್ತದೆ. ಒಂದು ಮೂರ್ತಿಯ ಮೂಲ ಆಕಾರ ಸಿದ್ಧಪಡಿಸಲು ಒಂದರಿಂದ ಎರಡು ಗಂಟೆ ಬೇಕಾದರೂ, ಅದು ಸಂಪೂರ್ಣವಾಗಿ ಸಿದ್ಧವಾಗಿ ಮಾರುಕಟ್ಟೆಗೆ ಹೋಗಲು ಹಲವು ದಿನಗಳ ಪ್ರಕ್ರಿಯೆ ಅಗತ್ಯವಾಗುತ್ತದೆ.

ಮೂರ್ತಿಯನ್ನು ತಯಾರಿಸಿದ ಬಳಿಕ ಒಣಗಿಸುವುದು, ಬಣ್ಣ ಹಚ್ಚುವುದು, ಫಿನಿಶಿಂಗ್ ನೀಡುವುದು ಸೇರಿದಂತೆ ಹಂತ ಹಂತವಾಗಿ ಕೆಲಸ ನಡೆಯುತ್ತದೆ. ಸಾವಿರಾರು ಮೂರ್ತಿಗಳನ್ನು ಸಿದ್ಧಪಡಿಸುವ ಸಂಪೂರ್ಣ ಪ್ರಕ್ರಿಯೆ ಎಂಟು ತಿಂಗಳವರೆಗೂ ಸಾಗುತ್ತದೆ.

ಗಣಪನ ಸಾವಿರಾರು ರೂಪ

ಈ ಕೆಲಸದಲ್ಲಿ ಸುಮಾರು 40 ಮಂದಿ ಕಾರ್ಮಿಕರು ತೊಡಗಿಸಿಕೊಂಡಿದ್ದಾರೆ. ದಿನಗೂಲಿ ಆಧಾರದ ಮೇಲೆ ಕೆಲಸ ಮಾಡುವ ಇವರಿಗೆ ದಿನಕ್ಕೆ ಸುಮಾರು ₹500 ನೀಡಲಾಗುತ್ತದೆ.

ಮೂರು ಅಡಿಯಿಂದ 12 ಅಡಿವರೆಗಿನ ವಿವಿಧ ಗಾತ್ರದ ಮೂರ್ತಿಗಳು ಇಲ್ಲಿ ಸಿದ್ಧವಾಗುತ್ತವೆ. ಪ್ರತಿಯೊಂದು ಮೂರ್ತಿಗೂ ವಿಭಿನ್ನ ವಿನ್ಯಾಸ, ಆಕಾರ ಮತ್ತು ಅಲಂಕಾರ ನೀಡಲಾಗುತ್ತದೆ. ಗ್ರಾಹಕರ ಬೇಡಿಕೆ ಹಾಗೂ ಮಾರುಕಟ್ಟೆಯ ಅಭಿರುಚಿಗೆ ಅನುಗುಣವಾಗಿ ಹೊಸ ಹೊಸ ಮಾದರಿಗಳನ್ನು ರೂಪಿಸುವ ಸವಾಲು ಕೂಡ ಇವರ ಮುಂದಿದೆ.

''ಈ ಕೆಲಸದಲ್ಲಿ ನಮಗೆ ತೃಪ್ತಿ ಇದೆ. ಹಲವು ವರ್ಷಗಳಿಂದ ಇದೇ ವೃತ್ತಿ ಮಾಡಿಕೊಂಡು ಬಂದಿದ್ದೇವೆ. ಮೂರ್ತಿಗಳ ತಯಾರಿಕೆಯಲ್ಲಿ ಬಳಸುವ ಸಾಮಗ್ರಿಗಳೊಂದಿಗೆ ಕೆಲಸ ಮಾಡುತ್ತಾ ಬಂದಿದ್ದೇವೆ. ಇದೇ ನಮ್ಮ ಜೀವನಾಧಾರ'' ಎಂದು ವಕ್ತಾರಾಮ ಹೇಳಿದರು.

ಮತ್ತೊಬ್ಬ ಮೂರ್ತಿ ತಯಾರಕ ಶಂಕರ್ ರಾಥೋಡ್ ಅವರ ಕುಟುಂಬವೂ ಹಲವು ವರ್ಷಗಳಿಂದ ಇದೇ ವೃತ್ತಿಯಲ್ಲಿದೆ. ''ಗಣೇಶ ಚತುರ್ಥಿ ಸಂದರ್ಭದಲ್ಲಿ ಗಣಪತಿ ಮೂರ್ತಿಗಳನ್ನು ತಯಾರಿಸುತ್ತೇವೆ. ಉಳಿದ ಸಮಯದಲ್ಲಿ ಮನೆಯ ಅಲಂಕಾರ ವಸ್ತುಗಳು ಹಾಗೂ ಗೊಂಬೆಗಳನ್ನು ತಯಾರಿಸುತ್ತೇವೆ. ನಮ್ಮ ಕುಟುಂಬದ 2530 ಮಂದಿ ಸುಮಾರು 1720 ವರ್ಷಗಳಿಂದ ಕಲಬುರಗಿಯಲ್ಲೇ ವಾಸವಾಗಿದ್ದಾರೆ. ಸಣ್ಣವರು ಶಾಲೆಗೆ ಹೋಗುತ್ತಾರೆ. ದೊಡ್ಡವರು ಮೂರ್ತಿ ತಯಾರಿಸುವ ಕೆಲಸ ಮಾಡುತ್ತಾರೆ'' ಎಂದು ಹೇಳಿದರು.

ಗ್ರಾಹಕರ ಬೇಡಿಕೆ ವರ್ಷದಿಂದ ವರ್ಷಕ್ಕೆ ಬದಲಾಗುತ್ತಿದೆ. ಸುಮಾರು 2224 ಬಗೆಯ ಮಾದರಿಗಳಲ್ಲಿ ಮೂರ್ತಿಗಳನ್ನು ತಯಾರಿಸಲಾಗುತ್ತಿದ್ದು, ವಿಭಿನ್ನ ವಿನ್ಯಾಸದ ಮೂರ್ತಿಗಳಿಗೆ ಹೆಚ್ಚಿನ ಬೇಡಿಕೆ ಇದೆ.

ಸಾಚೆಗಳ ಸಹಾಯದಿಂದ ಒಂದು ದಿನದಲ್ಲಿ ಏಳೆಂಟು ಮೂರ್ತಿಗಳವರೆಗೆ ತಯಾರಿಸಬಹುದಾದರೂ, ಅವುಗಳನ್ನು ಒಣಗಿಸಿ ಬಣ್ಣ, ಫಿನಿಶಿಂಗ್ ಸೇರಿದಂತೆ ಅಂತಿಮ ರೂಪ ನೀಡಲು ಸಾಕಷ್ಟು ಸಮಯ ಬೇಕಾಗುತ್ತದೆ. ಮೂರ್ತಿಗಳ ಗಾತ್ರ ಮತ್ತು ವಿನ್ಯಾಸಕ್ಕೆ ಅನುಗುಣವಾಗಿ ಬೆಲೆಯಲ್ಲೂ ವ್ಯತ್ಯಾಸವಿರುತ್ತದೆ. ಸಣ್ಣ ಮೂರ್ತಿಗಳಿಂದ ₹35 ಸಾವಿರದಿಂದ ₹45 ಸಾವಿರದವರೆಗಿನ ಮೂರ್ತಿಗಳಿಗೂ ಬೇಡಿಕೆ ಇದೆ ಎಂದು ಅವರು ತಿಳಿಸಿದರು.

ನಾಲ್ಕು ಲಕ್ಷ ಹೂಡಿಕೆ ಎಂಟು ತಿಂಗಳ ನಿರೀಕ್ಷೆ

ಮೂರ್ತಿ ತಯಾರಿಕೆಯ ವೃತ್ತಿಯಲ್ಲಿ ಹೂಡಿಕೆ ಕಡಿಮೆ ಇಲ್ಲ. ಸಾಮಗ್ರಿಗಳನ್ನು ಖರೀದಿಸಲು ಆರಂಭದಲ್ಲೇ ದೊಡ್ಡ ಮೊತ್ತ ಬೇಕಾಗುತ್ತದೆ.ಅಂಬರೀಶ್ ರಾಥೋಡ್ ಅವರ ಬದುಕಿನ ಕಥೆ ಈ ವೃತ್ತಿಯ ಮತ್ತೊಂದು ಮುಖವನ್ನು ತೆರೆದಿಡುತ್ತದೆ.

''ಮೊದಲು ರಾಜಸ್ಥಾನದಲ್ಲಿದ್ದೆವು. ಅಲ್ಲಿ ಬದುಕು ಸಾಗಿಸುವುದು ಕಷ್ಟವಾಗಿತ್ತು. ಸುಮಾರು 10 ವರ್ಷ ನೇಪಾಳದಲ್ಲಿಯೂ ಮೂರ್ತಿ ತಯಾರಿಸುವ ಕೆಲಸ ಮಾಡಿದ್ದೇವೆ. ನಂತರ ಕಲಬುರಗಿಗೆ ಬಂದೆವು. ಇಲ್ಲಿ ಬಂದು ಸುಮಾರು 20 ವರ್ಷಗಳಾಗಿವೆ'' ಎಂದು ಅವರು ಹೇಳಿದರು.

''ಮೊದಲ ಬಾರಿ ಮೂರ್ತಿ ತಯಾರಿಕೆಗಾಗಿ ಸುಮಾರು ₹4 ಲಕ್ಷ ಖರ್ಚು ಮಾಡಿ ಸಾಮಗ್ರಿಗಳನ್ನು ತಂದಿದ್ದೆವು. ಮದುವೆಯಾದ ನಂತರ ಕುಟುಂಬದ ಜವಾಬ್ದಾರಿ ಮತ್ತಷ್ಟು ಹೆಚ್ಚಾಯಿತು. ನಾನು ಹೆಚ್ಚು ಓದಿಲ್ಲ. ನಮ್ಮ ಅಜ್ಜ-ತಾತಂದಿರೂ ಇದೇ ಕೆಲಸ ಮಾಡುತ್ತಿದ್ದರು. ನಮಗೆ ಬೇರೆ ಕೆಲಸವೂ ಗೊತ್ತಿಲ್ಲ. ಹೀಗಾಗಿ ಈ ವೃತ್ತಿಯನ್ನೇ ಮುಂದುವರಿಸಿಕೊಂಡು ಬಂದಿದ್ದೇವೆ'' ಎಂದರು.

ಮಳೆ ಬಂದರೆ ಎಂಟು ತಿಂಗಳ ಪರಿಶ್ರಮ ನೀರಲ್ಲಿ ಹೋಮ

ಮೂರ್ತಿ ತಯಾರಕರಿಗೆ ಮಾರುಕಟ್ಟೆಯ ಅನಿಶ್ಚಿತತೆ ಒಂದೆಡೆಯಾದರೆ, ಹವಾಮಾನ ಮತ್ತೊಂದೆಡೆ ದೊಡ್ಡ ಸವಾಲಾಗಿದೆ. ಮಳೆ ಬಂದರೆ ಮೂರ್ತಿಗಳನ್ನು ಒಣಗಿಸುವುದು ಕಷ್ಟವಾಗುತ್ತದೆ. ಕೆಲಸ ಸ್ಥಗಿತಗೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಕೆಲಸ ಮಾಡುವ ಜಾಗಕ್ಕೆ ಬಾಡಿಗೆಯನ್ನೂ ಪಾವತಿಸಬೇಕಾಗುತ್ತದೆ.

''ಈ ಜಾಗಕ್ಕೆ ತಿಂಗಳಿಗೆ ಸುಮಾರು ₹4 ಸಾವಿರ ಬಾಡಿಗೆ ಕೊಡಬೇಕು. ಸಾಮಗ್ರಿಗಳ ಬೆಲೆಯೂ ಹೆಚ್ಚಾಗಿದೆ. ಆದರೆ ಗ್ರಾಹಕರು ಹಿಂದಿನ ದರದಲ್ಲೇ ಮೂರ್ತಿ ಕೇಳುತ್ತಾರೆ. ಒಂದು ಮೂರ್ತಿಯಿಂದ ₹1,000 ₹1,500ರಷ್ಟು ಉಳಿತಾಯವಾದರೆ ಮಾತ್ರ ನಮ್ಮ ಎಂಟು ತಿಂಗಳ ಪರಿಶ್ರಮಕ್ಕೆ ಸ್ವಲ್ಪ ಪ್ರತಿಫಲ ಸಿಗುತ್ತದೆ'' ಎಂದು ಅಂಬರೀಶ್ ಹೇಳಿದರು.

ಸಂಭ್ರಮದ ಹಿಂದೆ ಬದುಕಿನ ಹೋರಾಟದ ಕತೆ

ಗಣೇಶ ಚತುರ್ಥಿ ದಿನದಂದು ಭಕ್ತರು ಮೂರ್ತಿಗೆ ಪೂಜೆ ಸಲ್ಲಿಸಿ, ಸಂಭ್ರಮದಿಂದ ಹಬ್ಬ ಆಚರಿಸುತ್ತಾರೆ. ಆದರೆ ಆ ಮೂರ್ತಿಗೆ ರೂಪ ನೀಡಿದ ಕೈಗಳು ಅದಕ್ಕೂ ಮುನ್ನ ಎಂಟು ತಿಂಗಳ ಕಾಲ ಬದುಕಿನ ಹೋರಾಟದೊಂದಿಗೆ ಕೆಲಸ ಮಾಡಿರುತ್ತವೆ.

ಮಕ್ಕಳ ಶಿಕ್ಷಣ, ಕುಟುಂಬದ ನಿರ್ವಹಣೆ, ಕಾರ್ಮಿಕರ ಕೂಲಿ, ಸ್ಥಳದ ಬಾಡಿಗೆ, ಕಚ್ಚಾ ಸಾಮಗ್ರಿಗಳ ವೆಚ್ಚ, ಮಾರುಕಟ್ಟೆಯ ಬೇಡಿಕೆ ಮತ್ತು ಹವಾಮಾನದ ಅನಿಶ್ಚಿತತೆಇವೆಲ್ಲದರ ನಡುವೆ ಮೂರ್ತಿ ತಯಾರಕರು ಪ್ರತಿವರ್ಷ ಹೊಸ ನಿರೀಕ್ಷೆಯೊಂದಿಗೆ ಕೆಲಸ ಆರಂಭಿಸುತ್ತಾರೆ.

''ಎಂಟು ತಿಂಗಳು ದುಡಿದ ನಂತರ ಮೂರ್ತಿಗಳು ಉತ್ತಮವಾಗಿ ಮಾರಾಟವಾದರೆ ಮಾತ್ರ ನಮ್ಮ ಪರಿಶ್ರಮ ಸಾರ್ಥಕವಾಗುತ್ತದೆ. ಲಾಭ-ನಷ್ಟ ಏನೇ ಇರಲಿ, ಇದೇ ನಮ್ಮ ವೃತ್ತಿ, ಇದೇ ನಮ್ಮ ಬದುಕು'' ಎಂಬ ಅಂಬರೀಶ್ ಅವರ ಮಾತುಗಳು ಗಣೇಶೋತ್ಸವದ ವೈಭವದ ಹಿಂದಿರುವ ಶ್ರಮಜೀವಿಗಳ ಬದುಕಿನ ವಾಸ್ತವವನ್ನು ತೆರೆದಿಡುತ್ತವೆ.

ಹೀಗೆ, ಭಕ್ತರ ಮನೆ ಹಾಗೂ ಸಾರ್ವಜನಿಕ ಮಂಟಪಗಳಲ್ಲಿ ಪ್ರತಿಷ್ಠಾಪನೆಯಾಗುವ ಪ್ರತಿಯೊಂದು ಗಣೇಶ ಮೂರ್ತಿಯ ಹಿಂದೆ ತಿಂಗಳುಗಳ ಶ್ರಮ, ನೂರಾರು ಕೈಗಳ ದುಡಿಮೆ ಮತ್ತು ಒಂದು ಕುಟುಂಬದ ಬದುಕಿನ ನಿರೀಕ್ಷೆ ಅಡಗಿದೆ.





Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR